# ECHO OF HIS CALL

## ಕರೆಯ ಪ್ರತಿಧ್ವನಿ

KANNADA

ECHO OF HIS CALL

ESTD: 1969

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAANS

**Editor : S. SAM SELVA RAJ** | **16 Languages** | **Associate Editor : Rev. R. Rama Krishna**

**Vol. XXI** | **YEAR OF OUR LORD JESUS CHRIST, 2018 NOVEMBER** | **No. 1**


### ಪವಿತ್ರ ಬೈಬಲ್

**ಈ ಭಾಗವನ್ನು ಬಾಯಿಪಾಠ ಮಾಡಿರಿ.**
**ದೇವರಿಗೆ ಸ್ತೋತ್ರವಾಗಲಿ!**
**(ಕೀರ್ತನೆಗಳು 16:1-8)**

1. ದೇವರೇ ನಾನು ನಿನ್ನ ಶರಣಾಗತನು. ನನ್ನನ್ನು ಕಾಪಾಡು.
2. ನಾನು ಯೆಹೋವನನ್ನು ಕುರಿತು - ನೀನೇ ನನ್ನ ಒಡೆಯನು. ನನ್ನ ಸುಖವು ನಿನ್ನಲ್ಲಿಯೇ ಹೊರತು ಬೇರೆ ಇಲ್ಲ ಎಂತಲೂ.
3. ಭೂ ಲೋಕದಲ್ಲಿರುವ ದೇವ ಜನರ ವಿಷಯದಲ್ಲಿ ಇವರೇ ಶ್ರೇಷ್ಠರು, ಇವರೇ ನನಗೆ ಇಷ್ಟರಾದವರು ಎಂತಲೂ ಹೇಳುವೆನು.
4. ಇತರ ದೇವರುಗಳನ್ನು ಅವಲಂಬಿಸಿದವರಿಗೆ ಬಹಳ ಕಷ್ಟ ನಷ್ಟಗಳು ಉಂಟಾಗುವವು. ಅವರಂತೆ ನಾನು ರಕ್ತವನ್ನು ಪಾನದ್ರವ್ಯವಾಗಿ ಸಮರ್ಪಿಸುವುದೇ ಇಲ್ಲ. ಅವರ ನಾಮಗಳನ್ನಾದರೂ ಉಚ್ಚರಿಸುವುದಿಲ್ಲ.
5. ನನ್ನ ಪಾಲೂ ಪಾನವೂ ಯೆಹೋವನೇ. ನೀನೇ ನನ್ನ ಸ್ವಾಸ್ತವನ್ನು ಭದ್ರಗೊಳಿಸುತ್ತೀ.
6. ನನಗೆ ಪ್ರಾಪ್ತವಾಗಿರುವ ಸ್ವಾಸ್ತ್ಯವು ರಮಣೀಯವಾದದ್ದು. ಅದು ನನಗೆ ಸಂತೃಪ್ತಿಕರವಾಗಿದೆ.
7. ಯೆಹೋವನು ನನಗೆ ಆಲೋಚನೆಯನ್ನು ಹೇಳಿ ಕೊಡುತ್ತಾನೆ. ಆತನನ್ನು ಕೊಂಡಾಡುವೆನು. ರಾತ್ರಿ ಸಮಯಗಳಲ್ಲಿ ನನ್ನ ಅಂತರಾತ್ಮವು ನನ್ನನ್ನು ಬೋಧಿಸುತ್ತದೆ.
8. ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೆ ಇಟ್ಟುಕೊಂಡಿದ್ದೇನೆ. ಆತನು ನನ್ನ ಬಲಗಡೆಯಲ್ಲಿ ಇರುವುದರಿಂದ ನಾನು ಎಂದಿಗೂ ಕದಲುವುದಿಲ್ಲ.

# ತಪ್ಪು ತಿಳುವಳಿಕೆಯಲ್ಲಿರುವ ಜನರು !
# PEOPLE UNDER DELUSION!

**ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ವಿಷಯವಾಗಿಯೂ ನಾವು ಆತನ ಬಳಿಯಲ್ಲಿ ಕೂಡಿಕೊಳ್ಳುವುದರ ವಿಷಯವಾಗಿಯೂ ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ – ಕರ್ತನ ದಿನವು ಈಗಲೇ ಹತ್ತಿರವಾಯಿತೆಂಬುದಾಗಿ ದೇವರಾತ್ಮ ಪ್ರೇರಿತವಾದ ನುಡಿ ಇದೇ ಎಂದಾಗಲಿ – ಪೌಲನು ಹಾಗೆ ಹೇಳಿದನೆಂದಾಗಲಿ ಪೌಲನು ಹಾಗೆ ಬರೆದನೆಂದಾಗಲಿ ಯಾರಾದರೂ ಹೇಳಿದರೂ ನೀವು ಬೇಗನೇ ಬುದ್ಧಿಗೆಟ್ಟು ಚಂಚಲರಾಗಿ ಕಳವಳಪಡಬೇಡಿರಿ. ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ. ಯಾಕೆಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮ ಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವುದಿಲ್ಲ. (12 ಥೆಸಲೋನಿಕ – 1:1-3).**

ವೇದಾಂತಿಗಳು ಇದನ್ನು ದೇವರ ದಿನವೆಂದೂ ಪೌಲನು ಅಂತಿಮ ನ್ಯಾಯ ತೀರ್ಪಿನ ದಿನವೆಂದೂ ಹೇಳುತ್ತಾನೆ. ಪೌಲನು ಇದನ್ನು ಕ್ರಿಸ್ತನ ಎರಡನೆಯ ಬರೋಣದ ಕುರಿತಾಗಿ ತಿಳಿಸುತ್ತಾನೆ. ಎರಡು ವಿಷಯಗಳು ಘಟಿಸದೆ ಯೇಸುವಿನ ಬರುವಿಕೆಯು ಆಗುವುದಿಲ್ಲವೆಂದು ತಿಳಿಸುತ್ತಾನೆ.

1. ದೊಡ್ಡದಾದ ವಚನ ಭ್ರಷ್ಟತೆಯು ತೋರಿ ಬರುವುದು. ದೇವರನ್ನು ತಿಳಿದ ಅನೇಕ ಮಂದಿ ಹಿಂಜಾರುವರು.
2. ಅಂತ್ಯಕ್ರಿಸ್ತನು ಅಥವಾ ಪಾಪದ ಮನುಷ್ಯನು ತೋರಿಬರುವನು. ಪ್ರತಿಯೊಬ್ಬ ದೇವರನ್ನು ಪ್ರೀತಿಸುವವನು. ಈಗ ನಡೆಯುವ ಹಿಂಜಾರುವಿಕೆಯನ್ನು ಎಲ್ಲೆಲ್ಲಿಯೂ ಈಗ ಕಂಡು ಬರುವುದು. ದೇವರ ಪ್ರೀತಿಯಲ್ಲಿ ತಣ್ಣಗಾಗಿ ಈಗ ಅನೇಕರು ಬಿದ್ದು ಹೋಗಿದ್ದಾರೆ, ಬಿದ್ದು ಹೋಗುತ್ತಾರೆ. ಮತ್ತು ಬಿದ್ದು ಹೋಗುವರಾಗಿರು ವದು ಸಾಮಾನ್ಯವಾದ ವಿಷಯವಾಗಿದೆ. ಪಾಪದ ಮನುಷ್ಯನು ತೋರ್ಪಟ್ಟಾಗ ಮಾತ್ರ ದೇವರ ದಿನವು ಬರುವದೆಂದು ಪೌಲನು ಮನದಟ್ಟಾಗಿ ತಿಳಿಸಿದ್ದಾನೆ.

ಪೌಲನು ತಿಳಿಸಿದ ಮಾತಿನ ಅರ್ಥವೇನು? ಲೋಕದ ರಾಜನಾಗಿ ಅಂತ್ಯಕ್ರಿಸ್ತನು ಪಾಪದ ಮನುಷ್ಯನು ಲೋಕದ ಅಧಿಪತಿಯಾಗಿ ಸಿಂಹಾಸನದಲ್ಲಿ ಕುಳಿತುಕೊಂಡ ನಂತರ ಯೇಸುಕ್ರಿಸ್ತನು ಬಂದಾಗ ನಾವು ಆತನ ಗುರುತನ್ನು ಕಂಡು ಹಿಡಿಯುತ್ತೇವೆಯೋ? ನಾನು ಹಾಗೆ ಎಣಿಸುವುದಿಲ್ಲ. ಪೌಲನು ಎಣಿಸುತ್ತಾನೆ. ಕ್ರಿಸ್ತನು ಯಾವ ಸಮಯದಲ್ಲಾದರೂ ಬರಬಹುದು. ಕಣ್ಣು ಮುಟ್ಟಿ ತೆರೆಯುವಷ್ಟರೊಳಗೆ ಎಣಿಸಿದ ಘಳಿಗೆಯಲ್ಲಿ ಆತನ ಬರಬಹುದು. **"ಪ್ರತ್ಯಕ್ಷನಾದಾಗ"** ಎನ್ನುವ ಈ ಶಬ್ದದಲ್ಲಿ ಪೌಲನು ತಿಳಿಸಿದ ಅರ್ಥವಾಗುವ

*(3ನೇ ಪುಟಕ್ಕೆ ಮುಂದುವರಿದಿದೆ)*

TOUCHING LIVES BY TEACHING...SINCE 1969

# ಕರೆಯ ಪ್ರತಿಧ್ವನಿ

ಕನ್ನಡ, ಹಿಂದಿ, ಇಂಗ್ಲಿಷ್, ಮರಾಠಿ, ತೆಲುಗು, ಮಲಯಾಳಂ, ತಮಿಳು, ಬೆಂಗಾಳಿ, ಗುಜರಾಥಿ, ಸಿನ್ಹಾಳಿ, ಪಂಜಾಬಿ, ಆಸ್ಸಾಮಿ, ಒರಿಯಾ, ಉರ್ದು, ನೇಪಾಳಿ ಮತ್ತು ಆಫ್ರಿಕಾನ್ ಭಾಷೆಗಳಲ್ಲಿ ಮಾಸಪತ್ರಿಕೆ






**"ದಿನವು ಹತ್ತಿರವಾಯಿತು. ಹೌದು ಯೆಹೋವನ ದಿನ ಕಾರ್ಮುಗಿಲಿನ ದಿನ ಸಮೀಪಿಸಿತು. ಅದು ಜನಾಂಗಗಳಿಗೆ ನ್ಯಾಯ ತೀರಿಸತಕ್ಕ ಕಾಲ" (ಯೆಹೆಜ್ಕೇಲ 30:3)**

**ಕರ್ತನಲ್ಲಿ ಪ್ರಿಯರೇ,**

ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಮಧುರ ನಾಮದಲ್ಲಿ ನಿಮಗೆಲ್ಲರಿಗೂ ವಂದನೆಗಳು.

ನಾವು ಬಹಳ ಆತುರದಿಂದ ಮಾಸಿಕ ವಾರ್ತಾ ಪತ್ರಿಕೆಯನ್ನು ಕಾಯುತ್ತಿದ್ದೀರಿ. ಅದು ನಿಮಗೆ ಇಡೀ ತಿಂಗಳಿನ ಮನ್ನವನ್ನು ಕೊಡುತ್ತದೆ. ಅದು ಬೇಕಾದ ಆತ್ಮೀಯ ಆಹಾರವಾಗಿದೆ. ನಮಗೆ (ಫೋನ್ ಕಾಲ್), ದೂರವಾಣಿ ಕರೆ, ಎಸ್.ಎಮ್.ಎಸ್ ಮ್ಯಾಸೇಜ್‌ಗಳು ಮತ್ತು ಇಮೇಲ್ ಕಾಗದಗಳು ಆಂಗ್ಲ ಭಾಷೆ, ತಮಿಳು, ಮಲೆಯಾಳಂ, ತೆಲುಗು, ಹಿಂದಿ, ಕನ್ನಡ, ಮರಾಠಿ, ಅಸ್ಸಾಮಿಸ್, ಬಂಗಾಳಿ, ಉರ್ದು, ಗುಜರಾತಿ, ನೇಪಾಳಿ, ಒರಿಯಾ, ಪಂಜಾಬಿ, ಸಿಂಹಾಳಿಸ್ ಮತ್ತು ಆಫ್ರಿಕಾನ್ ಭಾಷೆಗಳನ್ನು ಮಾತಾಡುವ ಜನರು ನಿರತವಾಗಿ ಸಂಪರ್ಕದಲ್ಲಿದ್ದಾರೆ. ಈ ಜನರಿಗೆ ನಮ್ಮ ಮಾಸಿಕ ಪತ್ರಿಕೆಯು ಬಹಳ ಪ್ರಯೋಜನಕಾರಿಯಾಗಿದೆ. ಇದಕ್ಕಾಗಿ ಈ ಪತ್ರಿಕೆ ನಿಲ್ಲಬಾರದೆಂದು ಹಗಲು ರಾತ್ರಿ ಕಷ್ಟಪಟ್ಟು ದುಡಿಯುತ್ತಿದ್ದೇವೆ. ಹಣಕಾಸಿನ ತೊಂದರೆ, ಕಾಯಿಲೆ, ಕಾರ್ಮಿಕರ ಕೊರತೆ, ರಾಜಕೀಯ, ಸಾಮಾಜಿಕ ತೊಂದರೆಗಳನ್ನು ದೇವರು ಶಕ್ತಿಯನ್ನು ಕೊಟ್ಟಿದ್ದಾನೆ.

ನಮ್ಮ ಯೌವ್ವನ ಮಕ್ಕಳು ಹೆಚ್ಚಾಗಿ ದೇವರ ಸೇವೆಯಲ್ಲಿ ಮುಂದೆ ಬರಲು ಆಸಕ್ತಿ ತೋರಿಸುವುದಿಲ್ಲ. ಇದು ಬಹಳ ದುಃಖಕರವಾದ ವಿಷಯವಾಗಿದೆ. ಅವರು ಲೋಕದಲ್ಲಿರುವ ಕಂಪೆನಿಗಳಿಗಾಗಿ ಅದರಲ್ಲಿ ಸಿಕ್ಕುವ ಭಡ್ತಿಗಳಿಗಾಗಿ ಉತ್ಸಾಹ ಪಡುತ್ತಾರೆ. ಅವರು ಜಗತ್ತಿನ ಸುಖ, ಪಾರ್ಟಿ ಕುಟುಂಬದ ವ್ಯವಹಾರಗಳಲ್ಲಿ ನಿರತರಾಗಿರುತ್ತಾರೆ. ನಾನು 50 ವರ್ಷ ಯಾವ ವಿಶ್ರಾಂತಿ ತಕ್ಕೊಳ್ಳದೆ ಕಷ್ಟಪಟ್ಟು ದುಡಿದದ್ದರಿಂದ ಅದರ ಫಲವನ್ನು ಸಂತೋಷದಿಂದ ನೋಡುತ್ತಿದ್ದೇನೆ. ದೇವರಿಗೆ ಸತ್ಯವನ್ನು ತಿಳಿಸುವುದರಲ್ಲಿ ಎಷ್ಟು ಕಷ್ಟ ಬಂದಗೂ ನಾವು ಹಿಂಜರಿಯಲಿಲ್ಲ. ಜನರಿಗೆ ಸತ್ಯವನ್ನೇ ತಿಳಿಸಿದ್ದೇವೆ. ನಾವು ಅದರಲ್ಲೇ ಮುಂದುವರಿದುಕೊಂಡು ಹೋಗುತ್ತೇವೆ.

ನಮ್ಮ ಪವಿತ್ರ ಬೈಬಲಿಗೆ ಸಂಬಂಧ ಪಡದ ಕೆಲವು ಜೀವನ ಶೈಲಿಗಳನ್ನು ರಾಷ್ಟ್ರಗಳು ವಿಚಾರ ಮಾಡದೆ ಅನುಸರಿಸಲು ಒಪ್ಪಿಗೆ ಕೊಟ್ಟಿವೆ. ದೇವರ ಎದುರಿನಲ್ಲಿ ಹೋಮೋಸೆಕ್ಸುಯಾಲಿಟಿ (Homosexuality) ವಿರೋಧವಾದದ್ದು ಅಂಥ ಕ್ರಿಯೆಯನ್ನು ಬೇರೆ ರಾಷ್ಟ್ರಗಳೊಂದಿಗೆ ನಮ್ಮ ರಾಷ್ಟ್ರವೂ ಸ್ವೀಕರಿಸಿದೆ. ಮದುವೆ ಮೊದಲೇ ಈ ರೀತಿಯ ಕಾಮ ಪ್ರಚೋದನೆ ತಪ್ಪಲ್ಲ ಎನ್ನುವ ಹಂತಕ್ಕೆ ಬಂದಿದ್ದಾರೆ ಮತ್ತು ಅದನ್ನು ಸ್ವೀಕರಿಸಿದ್ದಾರೆ.

**ಆದರೆ ಈಗಿನ ಸಭಾ ಪಾಲಕರು ಮತ್ತು ಆಲಯಗಳು ಈ ವಿಷಯದಲ್ಲಿ ಚರ್ಚೆ ಮಾಡುವುದಿಲ್ಲ.** ಅದನ್ನು ಬದಿಗಿಡುತ್ತಾರೆ. ಇಂಥ ವಿಷಯಗಳನ್ನು ಅಲಕ್ಷಿಸುತ್ತಾರೆ. ಈ ವಿಷಯಗಳನ್ನು ದೇವ ಜನರ ಮುಂದೆ ಪ್ರಚಾರ ಮಾಡಲಿಕ್ಕಾಗಿ ಚರ್ಚೆ ಮಾಡಬಾರದು. ಇದು ಈಗಿನ ಕಾಲದ ದೇವ ಜನರ ಸ್ಥಿತಿಯಾಗಿದೆ. ದೇವರು ವಾತಾವರಣವನ್ನು ಬದಲಾಯಿಸುತ್ತಾನೆ. ತಮಿಳಿನಲ್ಲಿ ಒಂದು ಗಾದೆಯಿದೆ - ಕಳ್ಳತನವನ್ನು ಕಲಿತು ಮರೆತು ಬಿಡುವುದು. ನಾವು 1 ನೇ ಕೊರಿಂಥ 2:2 ರಲ್ಲಿ ಹೀಗೆ ಓದುತ್ತೇವೆ. **ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನು ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು. (1 ಕೊರಿಂಥ 2:2)** ಸಹೋದರರೇ ಮುಂದಿನ ಸಂಗತಿಯಲ್ಲಿ ನೀವು ಲಕ್ಷ್ಯವಿಡಬೇಕೆಂದು ನಾನು ಅಪೇಕ್ಷಿಸುತ್ತೇನೆ. ಅದೇನೆಂದರೆ - ನಮ್ಮ ಪಿತೃಗಳೆಲ್ಲರೂ ಮೇಘದ ನೆರಳಿನಲ್ಲಿದ್ದರು. ಅವರೆಲ್ಲರೂ ಸಮುದ್ರವನ್ನು ದಾಟಿ ಹೋದರು. ಅವರೆಲ್ಲರೂ ಮೋಶೆಯ ಶಿಷ್ಯರಾಗುವುದಕ್ಕಾಗಿ

**CHIEF EDITORS**
Pastor S. Sam Selva Raj
Angeline Selvakumari Henry, M.A., M.Ed.
**MANAGING EDITOR**
Pastor Alex Samson Sam, B.Th., M.Div.
**ADMINISTRATION**
Bro. N. Prakasam, M.A., General Manager
**EDITORIAL BOARD**
Sis. Jesy Veena Sam
Bro. M. Paulraj, M.A., B.Ed.
Sis. Serena Bevin, M.A., M. Phil., B.Ed.
Bro. J. R. Jayabalan
**ADVISORY BOARD**
Bro. N. Balaji, B.Com., B.L.
Dr. S. Rabinder Boaz, M.S.
Er. C.G.S. Baburao, B.Tech., M.Tech. (DM)
Dr. D. Dhaya Devadas
Bro. Jose Abraham
Bro. K. Puratchivendan, M.Com., B.L.
Bro. Thomas T. Jacob, B.Com., B.L.
**PUBLISHER & PRINTER**
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
**Phone :** (+91-44) 2852 8282
2852 9293, 2854 7766
**Email :** sam@echoofhiscall.org
biblecor@yahoo.co.in
**Websites :**
www.echoofhiscall.org
www.echoofhiscall.com

**Our Ministries:** ECHO OF HIS CALL Monthly Magazines (16 languages) ✹ BIBLECOR - Postal Courses (3 languages) ✹ Theological Correspondence Courses (2 languages) ✹ Church Planting ✹ Nehemiah Bible Colleges ✹ Gospel Printing Press ✹ Great Commission Partners ✹ Village English High School ✹ Crusades ✹ 24 Hour Prayer Ministry ✹ Community Development

ಮೇಘದಲ್ಲಿಯೂ ಸಮುದ್ರದಲ್ಲಿಯೂ ದೀಕ್ಷಾ ಸ್ನಾನವನ್ನು ಹೊಂದಿದರು. ಅವರೆಲ್ಲರೂ ದೈವಿಕವಾದ ಒಂದೇ ಆಹಾರವನ್ನು ತಿಂದರು. ಅವರೆಲ್ಲರೂ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು. ಆ ಬಂಡೆ ಕ್ರಿಸ್ತನೇ ಆದರೂ ಅವರೊಳಗೆ ಬಹು ಮಂದಿಯ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ. ಅವರು ಅಡವಿಯಲ್ಲಿ ಸಂಹರಿಸಲ್ಪಟ್ಟರೆಂದು ಬರೆದದೆಯಷ್ಟೇ. ನೀವು ವಿಗ್ರಹಾರಾಧಕ ರಾಗಬೇಡಿರಿ. ಅವರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸಬಾರ ದೆಂಬುವುದಕ್ಕಾಗಿ ಸಂಗತಿಗಳು ನಮಗೆ ನಿದರ್ಶನಗಳಾಗಿವೆ. ಅವರಲ್ಲಿ ಕೆಲವರು ವಿಗ್ರಹಾರಾಧಕರಾಗಿದ್ದರು. ಜನರು ಉಣ್ಣುವುದಕ್ಕೂ ಕುಡಿಯುವು ದಕ್ಕೂ ಕೂತುಕೊಂಡರು. ಕುಣಿದಾಡುವುದಕ್ಕೆ ಎದ್ದರು ಎಂದು ಬರೆದಿದ್ದೆ ಯಲ್ಲಾ. ಅವರಲ್ಲಿ ಕೆಲವರು ಜಾರತ್ವ ಮಾಡಿ ಒಂದೇ ದಿನದಲ್ಲಿ 23,000 ಮಂದಿ ಸತ್ತರು. ನಾವು ಜಾರತ್ವ ಮಾಡದೆ ಇರೋಣ - ಇದಲ್ಲದೆ ಅವರಲ್ಲಿ ಕೆಲವರು ಗುಣುಗುಟ್ಟಿ ಸಂಹಾರಕನ ಕೈಯಿಂದ ನಾಶವಾದರು. ನೀವು ಗುಣ ಗುಟ್ಟಬೇಡಿರಿ. ಇದು ನಮಗೆ ಬುದ್ಧಿವಾದಗಳಾಗಿ ಬರೆದವೆ. ಆದ ಕಾರಣ ನಿಂತಿದ್ದೇನೆಂದು ನೆನಸುವನು ಬೀಳದಂತೆ ಎಚ್ಚರಿಕೆಯಾಗಿರಲಿ. (1 ಕೊರಿಂಥ 10:1-12).

ಎಫೆಸ್ಸರಲ್ಲಿ "ಜಾರತ್ವ ಯಾವ ವಿಧವಾದ ಬಂಡುತನ ದ್ರವ್ಯಾಶೆ **ಇವುಗಳ ಸುದ್ದಿಯಾದಾರೂ ನಿಮ್ಮಲ್ಲಿ ಇರಬಾರದು.** ಇವುಗಳಿಗೇ ದೂರವಾಗಿರುವುದೇ ದೇವ ಜನರಿಗೆ ಯೋಗ್ಯವಾದದ್ದು. ಹೊಲಸು ಮಾತು ಹುಚ್ಚು ಮಾತು, ಕುಚೋದ್ಯ ಮಾತು ಇವು ಬೇಡ. ಆಯುಕ್ತವಾಗಿವೆ. ಇವುಗಳನ್ನು ಬಿಟ್ಟು ದೇವರಿಗೆ ಉಪಕಾರ ಸ್ತುತಿ ಮಾಡುವುದು ಉತ್ತಮ. ಜಾರರು ದುರಚಾರಿಗಳು ವಿಗ್ರಹಾರದಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ. ಹುರುಳಿಲ್ಲದ ಮಾತುಗಳನ್ನಾಡುವವರಿಗೆ ಕಿವಿಗೊಟ್ಟು ಮೋಸ ಹೋಗಬೇಡಿರಿ. ಅಂಥ ಕೃತ್ಯಗಳ ನಿಮಿತ್ತದಿಂದ ದೇವರ ಕೋಪವು ಆತನಿಗೆ ಅವಿಧೇಯರಾಗಿರುವವರ ಮೇಲೆ ಬರುತ್ತದೆ. ನೀವು ಅವರೊಂದಿಗೆ ಪಾಲುಗಾರರಾಗಿರಬೇಡಿರಿ. ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ. ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ.

ಬೈಬಲ್ ತಿಳಿಸುವ ಪ್ರಕಾರ ಇಡೀ ಲೋಕವೇ ಸೈತಾನನ ಹಿಡಿತ ಮತ್ತು ಇಚ್ಛೆ ಆಶೆಗಳಿಗೆ ಒಳಗಾಗಿವೆ. ಬುದ್ಧಿವಂತರು ಮತ್ತು ಕಲಿತವರು ಕೂಡಾ ಉರಿಯುವ ಬೆಂಕಿಯ ಕರೆಗೆ ಹೋಗುವರು. ಯಾಕೆಂದರೆ ಸರಿ ಯಾವುದು ಅಥವಾ ತಪ್ಪು ಯಾವುದೆಂದು ಅರಿಯರು.

**ದೇವರ ಸೇವೆಗಾಗಿ ನಾವು ಸಂಪೂರ್ಣವಾಗಿ ತುಂಬು ಹೃದಯ ದಿಂದ ಆತನ ಸೇವೆಯಲ್ಲಿ ಸಮರ್ಪಿತರಾಗಬೇಕು.**

ಇಡೀ ಲೋಕವನ್ನು ಈ ವಿಷಯದಿಂದ ವಿಮೋಚನೆ ಮಾಡುವುದು ನಮ್ಮ ಆಲಯಗಳ ಕೆಲಸವಾಗಿದೆ. ಆದರೆ ಅದನ್ನು ಬಿಟ್ಟು ತಮ್ಮದೇ ಆದ ರಾಜ್ಯವನ್ನು ಸ್ಥಾಪಿಸುವುದರಲ್ಲಿ ನಿರತರಾಗಿದ್ದಾರೆ. ಈಗಿನ ದಿನಗಳಲ್ಲಿ ಆಲಯಗಳನ್ನು ಟವರ್‌ಗಳನ್ನಾಗಿ ಮಾಡುವುದರಲ್ಲಿ ನಿರತರಾಗಿದ್ದಾರೆ. ಆದಷ್ಟು ಹಣದ ಸಂಪಾದನೆ ಹೇಗೆ ಮಾಡುವುದೆಂದು ಸಮಯ ಕಳೆಯುತ್ತಾರೆ. ಬೇರೆ ಆಲಯಗಳಿಂದ ಸದಸ್ಯರನ್ನು ಕರೆದುಕೊಂಡು ತಮ್ಮ ಆಲಯಗಳಲ್ಲಿ ಸೇರಿಸಿಕೊಳ್ಳುತ್ತಾರೆ. ಇದನ್ನು ಕಾರ್ಯ ರೂಪಕ್ಕೆ ತರಲು ಅನೇಕ ಪ್ರಯತ್ನಗಳನ್ನು ನಡೆಸಲಾಗುತ್ತದೆ. ಆಲಯವೇ ಜನರನ್ನು ಆರಾಧನೆಯಲ್ಲಿ ಒಂದುಗೂಡಿಸ ಬೇಕು. ಪ್ರತಿಯೊಬ್ಬ ದೇವರ ಮಗು ಬಂದು ಪಶ್ಚಾತ್ತಾಪ ಪಟ್ಟು ದೇವರ ಸುವಾರ್ತೆಯನ್ನು ದೇಶಗಳಲ್ಲಿ ಪ್ರಚಾರ ಮಾಡಬೇಕು.

"ಭೀಕರವೂ ಅಸಹ್ಯವೂ ಆದ ಸಂಗತಿಯು ದೇಶದಲ್ಲಿ ನಡೆದು ಬಂದಿದೆ. ಪ್ರವಾದಿಗಳು ಸುಳ್ಳಾಗಿ ಪ್ರವಾದಿಸುತ್ತಾರೆ. ಯಾಜಕರು ಅವರಿಂದ ಅಧಿಕಾರ ಹೊಂದಿ ದೊರೆತನ ಮಾಡುತ್ತಾರೆ. ನನ್ನ ಜನರು ಇದನ್ನೇ ಪ್ರೀತಿಸುತ್ತಾರೆ. ಕಟ್ಟಕಡೆಗೆ ನಾವು ಏನು ಮಾಡುವಿರಿ?" (ಯೆರೆಮೀಯ 5:30-31).

"ಚಿಕ್ಕವರು ಮೊದಲ್ಗೊಂಡು ದೊಡ್ಡವರ ತನಕ ಎಲ್ಲರೂ ಬಾಚಿ ಕೊಳ್ಳುತ್ತಲೇ ಇದ್ದಾರೆ. ಪ್ರವಾದಿಗಳು ಮೊದಲಾಗಿ ಯಾಜಕರ ವರೆಗೆ ಸಕಲರು ಮೋಸ ಮಾಡುತ್ತಾರೆ. ಮೇಲಾಗದಿದ್ದರೂ ಮೇಲು ಮೇಲು ಎಂದು ಹೇಳಿ ನನ್ನ ಜನರ ಗಾಯವನ್ನು ಮೇಲೆ ಮೇಲೆ ವಾಸಿ ಮಾಡಿದ್ದಾರೆ. ಯೆಹೋವನು ಹೀಗೆ ನುಡಿಯುತ್ತಾನೆ - ದಾರಿಗಳು ಕೂಡುವ ಸ್ಥಳದಲ್ಲಿ ನಿಂತುಕೊಂಡು ನೋಡಿ ಪುರಾತನ ಮಾರ್ಗಗಳು ಯಾವುವು? ಆ ಸನ್ಮಾರ್ಗವು ಎಲ್ಲಿ ಎಂದು ವಿಚಾರಿಸಿ ಅದರಲ್ಲೇ ನಡೆಯಿರಿ. ಇದರಿಂದ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವುದು (ಎಂದು ನಾನು ಅಪ್ಪಣೆ ಕೊಟ್ಟಾಗ ಅದರಲ್ಲಿ ನಾನು ನಡೆಯುವುದೇ ಇಲ್ಲವೆಂದರು (ಯೆರೆಮೀಯ 6.13, 14, 16)".

ಪ್ರಿಯ ದೇವರ ಮಕ್ಕಳೇ ದೇವರ ತೀರ್ಪು ಪಕ್ಕನೇ ಬರಲಿದೆ. ಅದು ಬಹಳ ಗಂಭೀರವಾದದ್ದು. ನೀವು ನಿಮ್ಮನ್ನು ಅದಕ್ಕೆ ತಯಾರು ಮಾಡಿಕೊಳ್ಳಿರಿ. ಎಚ್ಚರವಾಗಿರಿ. ಮೋಸ ಹೋಗಬೇಡಿರಿ. ಇಡೀ ಜಗತ್ತಿಗೆ ಸುವಾರ್ತೆ ಸಾರುವ ಹಂಗಿನಲ್ಲಿದ್ದೇವೆ. ನಮ್ಮ ದೇಶದಲ್ಲಿ ಪ್ರತಿಯೊಬ್ಬರು **ಯೇಸು ಕ್ರಿಸ್ತನ** ಹೆಸರಿನಲ್ಲಿ ಆರಾಧಿಸಬೇಕು.

**ದೇವರೇ ಸುವಾರ್ತೆಯನ್ನು ಸಾರುವುದೇ ನನ್ನ ಹೊರೆಯಾಗಿದೆ!**
**ನನ್ನ ದೇಶದಲ್ಲಿ ನಿನ್ನ ಹೆಸರು ಊರ್ಧ್ವಸ್ಥಾನದಲ್ಲಿರಬೇಕು!!**
**ಇದೇ ಭಾರ ನಿಮ್ಮ ಹೃದಯದಲ್ಲಿ ಕೂಡಾ ಇರಬೇಕು**
**ಒಂದೇ ಒಂದು ಜೀವನ.**
**ಬಹಳ ಬೇಗನೇ ಹಾರಿ ಹೋಗುತ್ತದೆ.**
**ನಾನು ದೇವರಿಗಾಗಿ ಏನು ಮಾಡುವೆ?**
**ಕೊನೆಯವರೆಗೂ ಇದು ನಿನ್ನ ಧ್ಯೇಯವಾಗಿದೆ!**

ನಾವು ನಿಮ್ಮ ಉತ್ತರದ ನಿರೀಕ್ಷೆಯಲ್ಲಿದ್ದೇವೆ. ನಾವು ನಿಮಗಾಗಿ ಪ್ರಾರ್ಥಿಸುತ್ತೇವೆ. ನಾವು ನಮಗಾಗಿ ಪ್ರಾರ್ಥಿಸಿರಿ.

ಯೇಸು ಕ್ರಿಸ್ತನಲ್ಲಿ ನಿಮ್ಮ ಸೇವಕ,

**ಎಸ್. ಸ್ಯಾಮ್ ಸೆಲ್ವರಾಜ್.**

---

*(1ನೇ ಪುಟದಿಂದ)*

ವಿಷಯುವಿದೆ. ಗ್ರೀಕ್ ಪದದ ಅರ್ಥ "ಮುಚ್ಚಿಡದ". ಪೌಲನು ಹೇಳುತ್ತಿದ್ದಾನೆ - ಅಂತ್ಯಕ್ರಿಸ್ತನ ಯೋಜನೆಗಳು ಇಡೀ ಲೋಕದಲ್ಲಿ ತಿಳಿಸಲ್ಪಟ್ಟಾಗ ತೆರೆಯಲ್ಪಟ್ಟಾಗ ಮತ್ತು ಸಭೆ ಆಲಯವು ಈ ವಿಷಯಗಳಲ್ಲಿ ತಿಳಿಸಲ್ಪಟ್ಟಾಗ ಅದರ ನಂತರವೇ ಯೇಸು ಕ್ರಿಸ್ತನು ಬರವವನಾಗಿದ್ದಾನೆ.

ಅಂತ್ಯ ಕ್ರಿಸ್ತನ ಯೋಜನೆಗಳನ್ನು ಧರ್ಮ ಶಾಸ್ತ್ರದಲ್ಲಿ ಸತ್ಯವೇದದಲ್ಲಿ ತಿಳಿಸಲ್ಪಟ್ಟಿದೆ. ಅದು ಕಾರ್ಯ ಪ್ರಯೋಚಿತವಾಗಿದೆ. (2. ಥೆಸಲೋನಿಕ 2:7) ಈ ರಹಸ್ಯವಾದ ಪಾಪವು ಅಂತ್ಯ ಕ್ರಿಸ್ತನ ಕೈಯ ಕೆಳಗೆ ಕಾರ್ಯರೂಪದಲ್ಲಿದೆ. ಕೂಡಲೇ ಕಳೆದು ಹೋದ ಮನುಷ್ಯರ ಮೇಲೆ ಈ ದುಷ್ಟತನದ ಆತ್ಮವು ಮನುಷ್ಯರ ಹೃದಯಗಳನ್ನು ಬಲವಂತಾಗಿ ತನ್ನೆಡೆಗೆ ಎಳೆದುಕೊಂಡು ಪಾಪದಿಂದ ತುಂಬಿದ ಮಾನವನು ಅಧಿಕಾರಕ್ಕೆ ಬರುವನು.

ಇದಕ್ಕೆ ಇನ್ನೊಂದು ಅರ್ಥವಿದೆ. ರಹಸ್ಯವಾದ ದುಷ್ಟತನವು ಗ್ರೀಕ್ ಶಬ್ದದ ಅರ್ಥ 'ನಿಶಬ್ದದ ತೊಡಗುವಿಕೆ' ಆಗಿದೆ. ಪೌಲನು ತನ್ನ ಕಾಲದಲ್ಲಿ ನಡೆಯುತ್ತಿದ್ದ ಸಂಪ್ರದಾಯವನ್ನು ನೋಡಿ ಅಂತ್ಯಕ್ರಿಸ್ತನ ಮರ್ಮ, ಸೈತಾನ ಕಾರ್ಯಗಳು, ಆ ಕಾಲದಲ್ಲಿ ನಡೆಯುತ್ತಿದ್ದವು.

ಅದೇ ವಿಷಯಗಳು ಈ ಕಾಲದಲ್ಲಿ ಗೂಢಾರ್ಥವಾದ ದುಷ್ಟ ಆತ್ಮವು ದುರ್ಮಾರ್ಗಗಳ ಶಕ್ತಿಯಿಂದ ಜನರನ್ನು ಪಾಪದ ಮಾನವನ ಕಡೆಗೆ ಎಳೆಯುತ್ತಾ ಇದೆ. ಸಾವಿರಾರು ಜನರನ್ನು ಗುಪ್ತದಿಂದ ಮರಳು ಮಾಡಿ ತನ್ನ ಕಡೆಗೆ ಎಳೆಯುತ್ತಾ ಇದ್ದಾನೆ. ನಿಶಬ್ದದಿಂದ ಗುಪ್ತವಾಗಿ

ಈ ಕೆಲಸ ನಡೆಯುತ್ತಲೇ ಇದೆ. ಬಹಳ ವೇಗವಾಗಿ ನಡೆಯುತ್ತದೆ. ಸದ್ಯದಲ್ಲೇ ಪಾಪದ ಮನುಷ್ಯನು ಅಧಿಕಾರಕ್ಕೆ ಬರಲಿದ್ದಾನೆ.

ಯೇಸು ಕ್ರಿಸ್ತನು ಬರುವ ಮೊದಲು ಅಂತ್ಯಕ್ರಿಸ್ತನ ವಿಚಾರಗಳನ್ನು ತಿಳಿಯಬೇಕಾದ ಅವಶ್ಯಕತೆಗಳಿಲ್ಲ. ಅವನ ಸೈತಾನ ಕ್ರಿಯೆಗಳು ಅನೇಕ ಸಾವಿರಾರು ವಿಶ್ವಾಸಿಗಳನ್ನು ಮರಳು ಗೊಳಿಸಿ ತನ್ನಡೆಗೆ ಎಳೆದುಕೊಳ್ಳುವ ಕಾರ್ಯಗಳನ್ನು ಮಾಡುತ್ತಿದ್ದಾನೆ.

## ಗುಪ್ತವಾದ ಗೂಢಾರ್ಥವನ್ನು ಪೌಲನು ವಿವರಿಸುತ್ತಾನೆ

ಪೌಲನು ಗುಪ್ತವಾದ ವಿಷಯದಲ್ಲಿ ಹೀಗೆ ಹೇಳುತ್ತಾನೆ - ಸೈತಾನ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಮರಳುಗೊಳಿಸಿ ಕಾನೂನಿಗೆ ವಿರೋಧ ವಾಗಿ ನಡೆಯುವಂತೆ ಮಾಡುವನು. ಪೌಲನು ಗ್ರೀಕ್ ಶಬ್ದದ ಅರ್ಥವನ್ನು ಅನ್ಯಾಯಕ್ಕೆ ಕಾನೂನಿಗೆ ವಿರೋಧವಾಗಿ ನಡೆಯುವುದಾಗಿದೆ. ಗುಪ್ತವಾದ ವಿಷಯವಾಗಿರುವುದೇನೆಂದರೆ ಕಾನೂನುಬಾಹಿರ ವಾಗಿ ನಡೆಯುವುದು. ಜನರು ಮನಬಂದಂತೆ ಕಾನೂನಿಗೆ ವಿರೋಧವಾಗಿ ನಡೆಯುವುದಾಗಿದೆ.

ಈ ರೀತಿ ನಡೆಯುವುದು ಬರೇ ಮಾನವನ ಆಡಳಿತದ ವಿರೋಧವಾಗಿ ನಡೆಯುವುದಲ್ಲ. ಅಧಿಕಾರದವರ ಮೇಲೆ ದಂಗೆ ಎಬ್ಬಿಸುವುದಲ್ಲದೆ, ಕಳ್ಳತನ ಮಾಡುವುದು, ಕೊಲೆ, ಶೋಷಣೆ ಈ ಎಲ್ಲಾ ಕಾರ್ಯಗಳಲ್ಲಿ ನಿರತರಾಗಿರುವುದು. ಈ ಕ್ರಿಯೆಗಳು ದೇವರ ಕೋಪವನ್ನು ಇನ್ನೂ ಹೆಚ್ಚು ಮಾಡುತ್ತದೆ. ಕಾನೂನು ಬಾಹಿರ ಕಾರ್ಯಗಳು ಇನ್ನೂ ಆಳಕ್ಕೆ ಹೋಗುವುದು. ದೇವರ ಸತ್ಯತೆ, ಆತನ ಆಜ್ಞೆಗಳನ್ನು ಉಲ್ಲಂಘಿಸುವುದೇ ಮುಖ್ಯ ಕೆಲಸವಾಗಿದೆ. ಧರ್ಮಶಾಸ್ತ್ರಕ್ಕೆ ವಿರೋಧವಾಗಿ ನಡೆಯುವುದು ಇದರ ಮುಖ್ಯ ತಾತ್ಪರ್ಯ ವಾಗಿದೆ.

ನಮ್ಮ ದೇಶದಲ್ಲಿ ಕಾನೂನು ರಹಿತವಾಗಿ ನಡೆಯುವ ಆತ್ಮ ಬಹಳ ಕಾರ್ಯಗಳನ್ನು ನಡೆಸುತ್ತದೆ. ನಮ್ಮ ಸಮಾಜದಿಂದ ದೇವರನ್ನು ಓಡಿಸುವಂಥ ಪ್ರಯತ್ನ ನಡೆಯುತ್ತದೆ. ಸೈತಾನನು ಇದೇ ಆತ್ಮವನ್ನು ಹವ್ವಳನ್ನು ವಂಚಿಸಲು ಉಪಯೋಗಿಸಿ ದನು. ಅವನು ಹವ್ವಳಿಗೆ ಹೀಗೆ ಹೇಳಿದನು - ದೇವರು ನಿನ್ನ ಅವಿಧೇಯತನಕ್ಕೆ ಶಿಕ್ಷಿಸುವುದಿಲ್ಲ. ನೀನು ಹಣ್ಣನ್ನು ತಂದು ಆಶೆಯನ್ನು ತೀರಿಸಿಕೊಳ್ಳು. ನಿನಗೆ ಏನೂ ಕೊಡಬೇಕಾಗಿಲ್ಲ.

ಇದು ನರಕದಿಂದ ಬಂದ ಸುಳ್ಳಾಗಿದೆ. ಸೈತಾನನು ಕ್ರೈಸ್ತರಲ್ಲಿ ಇದೇ ಸುಳ್ಳನ್ನು ಹರಡುತ್ತಿದ್ದಾನೆ. ಸಮಾಜದಲ್ಲಿ ಕಾನೂನನ್ನು ತೆಗೆದು ಹಾಕಲು ಪ್ರಯತ್ನಿಸುತ್ತಿದ್ದಾನೆ. ತನ್ನ ಶಕ್ತಿಯಿಂದ ದಿನದಿಂದ ದಿನಕ್ಕೆ ಹೆಚ್ಚು ಸಂಖ್ಯೆಯಲ್ಲಿ ಕ್ರೈಸ್ತರನ್ನು ಪಾಪದಲ್ಲಿ ಸಿಕ್ಕಿಸಿ ಹಾಕುತ್ತಾನೆ. ಅವರು ಅದಕ್ಕಾಗಿ ಏನೂ ಕೊಡಬೇಕಾಗಿಲ್ಲ. ಕ್ರಿಸ್ತನಿಗೆ ವಿರೋಧವಾಗಿ ನಡೆದು ಅವನ ಆಜ್ಞೆಗಳನ್ನು ಉಲ್ಲಂಘಿಸುವುದೇ ಸೈತಾನನ ಕೆಲಸವಾಗಿದೆ.

ಅನೇಕ ಉಗುರು ಬೆಚ್ಚಗಿನ ವಿಶ್ವಾಸಿಗಳು ಅವನು ಹಾಕಿದ ಜಾಲದಲ್ಲಿ ಬಿದ್ದು ಬಿಟ್ಟಿದ್ದಾನೆ. ಕೆಲವರು ಅಂತ್ಯಕ್ರಿಸ್ತನ ಸಂಗಡ ಒಂದಾಗಿದ್ದಾರೆ. ಪಾಪದ ಮನುಷ್ಯನು ಅಧಿಕಾರಕ್ಕೆ ಬಂದಾಗ ಅವನೊಂದಿಗೆ ಸೇರಿಕೊಳ್ಳಲು ತಯಾರಾಗಿದ್ದಾರೆ. ಅದ್ಭುತಗಳನ್ನು ಮಾಡಲು ಸಮಸ್ಯೆಗಳನ್ನು ಬಗೆಹರಿಸುವ ಯತ್ನಗಳಲ್ಲಿ ಕಾರ್ಯ ಪ್ರವರ್ತಕರಾಗಿದ್ದಾರೆ.

ನಾನು ಅಂತ್ಯ ಕ್ರಿಸ್ತನ ಯಾವ ವಿಷಯ ದಲ್ಲಿಯೂ ಪಾಲುಗೊಳ್ಳುವುದಿಲ್ಲವೆಂದು ನೀನು ಎಣಿಸಬಹುದು. ಆದರೆ ಪೌಲನು ಹೇಳುತ್ತಾನೆ. ಜನರು ತಮ್ಮ ಪಾಪದಲ್ಲೇ ಮರೆತು ಬಿಟ್ಟು ಅದರಲ್ಲಿ ಮಗ್ನರಾಗಿರುವಾಗಲೇ ಅಂತ್ಯಕ್ರಿಸ್ತನು ಪಟ್ಟಕ್ಕೆ ಬರುವನು. "ಆ ಅಧರ್ಮ ಸ್ವರೂಪವೇ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರು ವುದು. ಅದು ಮೋಸಗೊಳಿಸುವ ಸಕಲ ವಿಧ ವಾದ ಮಹತ್ಕಾರ್ಯ ಸೂಚಕ ಕಾರ್ಯ ಅದ್ಭುತ ಕಾರ್ಯ ಇವುಗಳಿಂದಲೂ ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶನ ಮಾರ್ಗ ದಲ್ಲಿರುವವರಿಗೋಸ್ಕರ ಸಂಭವಿಸುವುದು. ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. (2. ಥೆಸಲೋನಿಕ 2:9-10).

**ಸೈತಾನನು ದೊಡ್ಡ** ಸಂಖ್ಯೆಯಲ್ಲಿ ಜನರನ್ನು ಮೋಸಗೊಳಿಸಿ, ಸುಳ್ಳುಗಳನ್ನು ನಂಬುವಂತೆ ಮಾಡುವನು. ಅವನ ಸುಳ್ಳು ಏನಾಗಿರಬಹುದು? ಅವನು ಹವ್ವಳನ್ನು ವಂಚಿಸಿದ ಹಾಗೆ ದೇವರು ಪಾಪ ಮಾಡಿದರೆ ಶಿಕ್ಷಿಸುವುದಿಲ್ಲ.

*(6ನೇ ಪುಟಕ್ಕೆ ಮುಂದುವರಿದಿದೆ)*


# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

**Annual Subscription: Rs. 100/-** **Life Subscription: Rs. 2000/-**

The multifarious activities of **Echo of His Call Ministry** is supported by the free-will offerings and donations of the God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us. Whenever you change your postal or e-mail addresses, please do inform us your old and new addresses.

**Echo of His Call** is available in 16 languages in our websites also. You can read it by going into the site as well as downloading it and get blessed.

Your letters, prayer requests and your financial helps (by D.D., Cheque, M.O. etc.) to **ECHO OF HIS CALL** may be sent to the address below.

Please send your **Land Phone / Cell Phone Numbers and E.mail addresses** for updation.



**ECHO OF HIS CALL**

10, MOHAMMED ABDULLAH 2nd STREET, CHEPAUK, CHENNAI - 600 005, INDIA

Ph : (+91-44) 2852 8282, 2852 9293, 2854 7766, Cell : (+91) 98410 71852

E-mail : sam@echoofhiscall.org / biblecor@yahoo.co.in

Websites : www.echoofhiscall.org / www.echoofhiscall.com



**YOU CAN SEND YOUR DONATIONS ON ONLINE ALSO**

**The details of our Bank Accounts are given below. Please inform us the details of your remittances.**

| Bank | Branch | Name | IFSC Code No. | Account Number |
|---|---|---|---|---|
| 1. STATE BANK OF INDIA | Triplicane, Chennai -5 | S. Sam Selva Raj | SBIN 0000249 | 102329 34679 |
| 2. ICICI BANK | Anna Salai, Chennai -2 | Echo of His Call | ICIC 0006038 | 6038 05022319 |

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

**ಹಂಚುವುದು (ಗಲಾತ್ಯ. 6:3), ಪ್ರೋತ್ಸಾಹಿಸುವುದು (ರೋಮಾಪುರ. 12:13)**
**ತ್ವರಿತಗೊಳಿಸುವುದು (II ತಿಮೋಥಿ. 1:6)**

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ನವೆಂಬರ್ 2018 ರಿಂದ 18 ಡಿಸೆಂಬರ್ 2018 ರ ವರೆಗೆ**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

### ದೇವರು ಕಾರ್ಯನಿರತನಾಗಿದ್ದಾನೆ! ಸ್ತುತಿಗೆ ಅರ್ಹವಾದ ವಿಷಯಗಳು

| | |
|---|---|
| ನವೆಂಬರ್ 19 | ದೇವರು ಆಸ್ಪತ್ರೆಯ ಸೇವೆಯಲ್ಲಿ ಅದ್ಭುತಗಳನ್ನು ಮಾಡುವುದಕ್ಕಾಗಿ ದೇವರನ್ನು ಸ್ತುತಿಸಿರಿ. |
| ನವೆಂಬರ್ 20 | ಪ್ರಮುಖ ಆಲಯ ಮತ್ತು ಶಾಖಾ ಆಲಯಗಳಲ್ಲಿ ದೇವರು ಹೊಸ ಆತ್ಮಗಳನ್ನು ಸೇರಿಸಿದ್ದಕ್ಕೆ ದೇವರನ್ನು ಆರಾಧಿಸಿರಿ. |
| ನವೆಂಬರ್ 21 | 2019 ಕ್ಕೆ **ಕರೆಯ ಪ್ರತಿಧ್ವನಿ ಸಂಸ್ಥೆಯು** ಕ್ಯಾಲೆಂಡರನ್ನು ಮಾಡಲು ದೇವರನ್ನು ಸ್ತುತಿಸಿರಿ. |
| ನವೆಂಬರ್ 22 | **ನೆಹೆಮಿಯ ಬೈಬಲ್ ಕಾಲೇಜಿಗೆ** ಒಳ್ಳೆಯ ಉಪನ್ಯಾಸಕರನ್ನು ಕೊಟ್ಟದಕ್ಕಾಗಿ ದೇವರಿಗೆ ಉಪಕಾರ ಹೇಳಿರಿ. |
| ನವೆಂಬರ್ 23 | ನಮ್ಮ ಪ್ರಮುಖ ಆಲಯದಲ್ಲಿ 7 ಆರಾಧನೆಗಳು 5 ಭಾಷೆಗಳಲ್ಲಿ ನಡೆಸುವುದಕ್ಕಾಗಿ ದೇವರಿಗೆ ಸ್ತೋತ್ರ ಹೇಳಿರಿ. |
| ನವೆಂಬರ್ 24 | ನಮ್ಮ ಪ್ರಿಂಟಿಂಗ್ ಪ್ರೆಸ್ಸು 16 ಭಾಷೆಗಳಲ್ಲಿ ಮಾಸ ಪತ್ರಿಕೆಗಳನ್ನು ಕ್ರಮ ಪ್ರಕಾರವಾಗಿ ಸುವಾರ್ತಾ ಸೇವಾ ಶಿಬಿರಗಳಿಗೆ ಕಳುಹಿಸಲು ಸಹಾಯ ಮಾಡಿದ ದೇವರನ್ನು ಭಜಿಸಿರಿ. |
| ನವೆಂಬರ್ 25 | ನಮ್ಮ ಸೈಂಟ್ ಪೌಲ್ಸ್ ಮೆಟ್ರಿಕ್ಯೂಲೇಶನ್ ಶಾಲೆಯ ಪ್ರಾಂಶುಪಾಲ, ಶಿಕ್ಷಕ ವರ್ಗ ಮತ್ತು ಸ್ಟಾಫ್ ಮೆಂಬರ್ಸ್‌ಗಳನ್ನು ಕೊಟ್ಟದ್ದಕ್ಕಾಗಿ ದೇವರನ್ನು ಕೀರ್ತನೆಗಳಿಂದ ವಂದಿಸಿರಿ. |
| ನವೆಂಬರ್ 26 | **ಕರೆಯ ಪ್ರತಿಧ್ವನಿ ಸಂಸ್ಥೆಯ** ಮಾಸಿಕ ಪತ್ರಿಕೆಯು 16 ಭಾಷೆಗಳಲ್ಲಿ ಹೊರ ಬಂದಾಗ ದೊಡ್ಡ ಸಂಖ್ಯೆಯಲ್ಲಿ ಜನರು ಓದುವುದಕ್ಕಾಗಿ ಆತನನ್ನು ಚಪ್ಪಾಳೆ ತಟ್ಟಿ ನಮಿಸಿರಿ. |
| ನವೆಂಬರ್ 28 | ನಮ್ಮ ಶಿಬಿರಗಳಲ್ಲಿ ದೇವ ಸೇವಕರನ್ನು ದೇವರು ರಕ್ಷಿಸುವುದಕ್ಕಾಗಿ ಆತನು ಸ್ತುತಿಗೆ ಅರ್ಹನಾಗಿದ್ದಾನೆ. |
| ನವೆಂಬರ್ 29 | ನಮ್ಮ ಎಲ್ಲಾ ಸಂಪಾದಕರುಗಳಿಗಾಗಿ ದೇವರಿಗೆ ಘನಮಾನ ಸ್ತುತಿ ಸಲ್ಲಿಸಿರಿ. |
| ನವೆಂಬರ್ 29 | ನಮ್ಮ ಎಲ್ಲಾ ಸಂಪಾದಕರುಗಳಿಗಾಗಿ ದೇವರಿಗೆ ಘನಮಾನ ಸ್ತುತಿ ಸಲ್ಲಿಸಿರಿ. |
| ನವೆಂಬರ್ 30 | ನಮ್ಮ ಸೀನಿಯರ್ ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಎಲ್ಲಾ ಕೇಡು ಗಂಡಾಂತರಗಳಿಂದ ತಪ್ಪಿಸಿದ್ದಕ್ಕಾಗಿ ದೇವರನ್ನು ಕೊಂಡಾಡಿರಿ. |
| ಡಿಸೆಂಬರ್ 01 | **ಕರೆಯ ಪ್ರತಿಧ್ವನಿ ಸಂಸ್ಥೆ**ಗಳ ಎಲ್ಲಾ ಚಟುವಟಿಕೆಗಳನ್ನು ಕಳೆದ ತಿಂಗಳಿನಲ್ಲಿ ಸಾಂಗ ರೂಪವಾಗಿ ನಡೆಸಿದ್ದರಿಂದ ದೇವರಿಗೆ ಭಯ-ಭಕ್ತಿಯಿಂದ ಜಯಘೋಷ ಮಾಡಿರಿ. |
| ಡಿಸೆಂಬರ್ 02 | ಈ ವರ್ಷದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮೀಯ ಪುಸ್ತಕಗಳನ್ನು ತಯಾರು ಮಾಡಿದ್ದಕ್ಕೆ ದೇವರಿಗೆ ಎಡೆಬಿಡದೆ ಗಾಯನ ಮಾಡಿರಿ. |
| ಡಿಸೆಂಬರ್ 03 | ಸಹೋದರಿ ಜೆಸಿ ವೀಣಾ ಸ್ಯಾಮ್‌ನ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿದೆ. ಆತನ ಕೃಪೆಯು ಶಾಶ್ವತವಾದದ್ದೆಂದು ಹೇಳಿರಿ. |

### ಪ್ರಾರ್ಥನಾ ಮನವಿಗಳು : ದೇವರು ಕಾರ್ಯ ನಿರತನಾಗಿದ್ದಾನೆ!

| | |
|---|---|
| ಡಿಸೆಂಬರ್ 04 | **ಕರೆಯ ಪ್ರತಿಧ್ವನಿ ಸಂಸ್ಥೆಯ** ಹಣಕಾಸಿನ ಅಗತ್ಯತೆಗಳನ್ನು ದೇವರು ಈ ತಿಂಗಳಿನಲ್ಲಿ ಪೂರೈಸುವಂತೆ ಪ್ರಾರ್ಥಿಸಿರಿ. |
| ಡಿಸೆಂಬರ್ 05 | ದೇವರ ಭಯವು ಜನರಲ್ಲಿ ಉಂಟಾಗುವಂತೆ ಎಡೆಬಿಡದೆ ಪ್ರಾರ್ಥಿಸೋಣ. |
| ಡಿಸೆಂಬರ್ 06 | ತಪ್ಪಾದ ವಿಷಯಗಳನ್ನು ಆಲಯಗಳಿಂದ ತೆಗೆದು ಹಾಕುವಂತೆ. |
| ಡಿಸೆಂಬರ್ 07 | ಜಗತ್ತಿನಲ್ಲಿ ಬಲವಾದ ಉಜ್ಜೀವನ ಆಗುವಂತೆ ತಪ್ಪದೆ ಪ್ರಾರ್ಥನೆ ಮಾಡಿರಿ. |
| ಡಿಸೆಂಬರ್ 08 | ಇಡೀ ಜಗತ್ತಿನಲ್ಲಿ ನಾಶವಾಗಿ ಹೋಗುತ್ತಿರುವ ಆತ್ಮಗಳ ರಕ್ಷಣೆಗಾಗಿ ಪ್ರಾರ್ಥನೆಯಲ್ಲಿ ಮನವಿ ಮಾಡಿರಿ. |
| ಡಿಸೆಂಬರ್ 09 | **ಡೇಲಿ ಹೆವನ್ಲಿ ಮನ್ನಾ (Daily Heavenly manna)** ಸದ್ಯದಲ್ಲೇ ಬಿಡುಗಡೆಯಾಗುವುದಕ್ಕಾಗಿ ದೇವರೊಡನೆ ಪ್ರಾರ್ಥನೆಯಲ್ಲಿ ಅರಿಕೆ ಮಾಡಿರಿ. |
| ಡಿಸೆಂಬರ್ 10 | ನಮ್ಮ ಬೈಬಲ್ ಕಾಲೇಜುಗಳಲ್ಲಿ ನಡೆಸುತ್ತಿರುವ **ಥಿಯೋಲೋಜಿಕಲ್ ಅಂಚೆ ತರಗತಿ ಮತ್ತು ಬೇಸಿಕ್ ಬೈಬಲ್ ತರಗತಿ**ಗಳಿಗಾಗಿ ದೇವರಲ್ಲಿ ಪ್ರಾರ್ಥನೆಯೊಡನೆ ಕೇಳಿಕೊಳ್ಳಿರಿ. |
| ಡಿಸೆಂಬರ್ 11 | ದೇವರ ಸೇವಕರ ರಕ್ಷಣೆಗಾಗಿ ದೇವರೊಡನೆ ಪ್ರಾರ್ಥನೆಯಲ್ಲಿ ಕೂಗಿಕೊಳ್ಳಿರಿ. |
| ಡಿಸೆಂಬರ್ 12 | ಜಗತ್ತಿನಲ್ಲಿ ಎಲ್ಲಾ ಕಡೆ ಶಾಂತಿ ನೆಲೆಸಲು ದೇವರಲ್ಲಿ ಮೊಣಕಾಲೂರಿ ಮನವಿ ಮಾಡಿರಿ. |
| ಡಿಸೆಂಬರ್ 13 | ಪ್ರಾರ್ಥನಾ ವೀರರಿಗೆ, ಅಜೀವ ಸದಸ್ಯರಿಗೆ, ವಿಶ್ವಾಸ ಸದಸ್ಯರಿಗೆ, ಪರಮಾದೇಶದಲ್ಲಿ ಪಾಲುಗಾರರಿಗೆ ಮತ್ತು ಕುಟುಂಬದವರಿಗೆ ದೇವರು ಆಶೀರ್ವಾದಿಸುವಂತೆ ಪ್ರಾರ್ಥನೆಯಲ್ಲಿ ನೆನಪು ಮಾಡಿಕೊಳ್ಳಿರಿ. |
| ಡಿಸೆಂಬರ್ 14 | ನಮ್ಮ ಎಲ್ಲಾ ಆಲಯಗಳ ಅಗತ್ಯತೆಗಳನ್ನು ದೇವರು ಪೂರೈಸುವಂತೆ ಪ್ರಾರ್ಥನೆಯಲ್ಲಿ ಜ್ಞಾಪಿಸಿಕೊಳ್ಳಿರಿ. |
| ಡಿಸೆಂಬರ್ 15 | ಜಗತ್ತಿನ ಎಲ್ಲಾ ದೂರದರ್ಶನ ಪ್ರಚಾರಕರನ್ನು ದೇವರು ಆಶೀರ್ವಾದಿಸುವಂತೆ ಪ್ರಾರ್ಥನೆಯಲ್ಲಿ ವಿನಂತಿಸಿಕೊಳ್ಳೋಣ. |
| ಡಿಸೆಂಬರ್ 16 | **ಸೈಂಟ್ ಪೌಲ್ಸ್ ಮೆಟ್ರಿಕ್ಯೂಲೇಶನ್ ಶಾಲೆ**ಯನ್ನು ದೇವರು ಆಶೀರ್ವಾದಿಸುವಂತೆ ದೇವರನ್ನು ಬೇಡಿಕೊಳ್ಳಿರಿ. |
| ಡಿಸೆಂಬರ್ 17 | ನಮ್ಮ ಎಲ್ಲಾ ಸೇವೆಯ ಸಿಬ್ಬಂದಿಗಳನ್ನು ದೇವರು ರಕ್ಷಿಸುವಂತೆ ಪ್ರಾರ್ಥನೆ ಮಾಡಿರಿ. |
| ಡಿಸೆಂಬರ್ 18 | ದೇವರು ಎಲ್ಲಾ ಮಕ್ಕಳನ್ನು ಶಾರೀರಿಕ ಮತ್ತು ಆತ್ಮೀಯವಾಗಿ ಆಶೀರ್ವಾದಿಸುವಂತೆ ಪ್ರಾರ್ಥನೆ ಮಾಡಿರಿ. |

*(4ನೇ ಪುಟದಿಂದ)*

ಪೌಲನು ಹೇಳುವ ಹಾಗೆ - ಸೈತಾನನು ಜನರನ್ನು ಬಲವಾಗಿ ಈ ಸುಳ್ಳನ್ನು ನಂಬಿಸುವಲ್ಲಿ ಜಯಪ್ರದನಾಗುತ್ತಾನೆ. ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. (ವಚನ 10) ಈ ಕಾರಣದಿಂದ ಎಂಬುದಾಗಿ ಅವನು ಕೊಡಿಸುತ್ತಾನೆ. ಅದೇ ಕಾರಣದಿಂದ ದೇವರು ಅಸತ್ಯ ನುಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವುದಕ್ಕೆ ಅವರನ್ನು ಬಿಡುತ್ತಾನೆ (ವಚನ 11).

ಅಪೋಸ್ತಲನಾದ ಪೌಲನು ಹೀಗೆ ಹೇಳುತ್ತಾನೆ - ಯಾರು ದೇವರ ಆಜ್ಞೆಗಳಿಗೆ ವಿಧೇಯರಾಗುವುದಿಲ್ಲವೋ ಮತ್ತು ಗೌರವ ಕೊಡುವುದಿಲ್ಲವೋ ಅವರು ಭ್ರಮೆಗೆ ಒಳಗಾಗುತ್ತಾರೆ. ಮೊದಲು ಅವರು ಪಾಪ ಮಾಡುತ್ತಾರೆ. ಅದು ಮಾಡುವುದು ಸರಿ ಎಂದು ತಿಳಿದುಕೊಳ್ಳುತ್ತಾರೆ. ಸುಲಭದ ಕೃಪೆಯು ಕಡೆಯಿಂದ ತಮಗೆ ಏನಾದರೂ ಸಿಕ್ಕುವುದೆಂದು ಪ್ರಯತ್ನಿಸುತ್ತಾರೆ. ದೇವರ ಕಡೆಯ ಕೃಪೆಯ ಬದಲು ತಾವೇ ಕೃಪೆಯನ್ನು ಪಡೆಯಲು ಪ್ರಯತ್ನ ಮಾಡುವರು. ಅವ ಕೃಪೆಗೆ ಅನುಮತಿ ಬೇಕಾಗಿದೆ. ಅದು ಪಶ್ಚಾತ್ತಾಪಕ್ಕೆ ಕೊಂಡು ಹೋಗುತ್ತದೆ.

**ಈಗ ಜಗತ್ತು ಭ್ರಮೆಯಲ್ಲಿ ಮುಳುಗಿ ಹೋಗಿದೆ!**

ಈ ದಿನ ಜಗತ್ತು ಸೈತಾನನ ಸುಳ್ಳಿನಿಂದ ಮುಳುಗಿ ಹೋಗಿದೆ. ಅದು ಅಸಾಧಾರಣವಾದ ಶಕ್ತಿಯಿಂದ ಕೂಡಿದ್ದಾಗಿದೆ. ನಾನು ಇಲ್ಲಿ ರಿಪಬ್ಲಿಕನ್ ಅಥವಾ ಡೆಮೋಕ್ರೆಟ್‌ಗನಾಗಿ ಮಾತಾಡುವುದಿಲ್ಲ. ನಾನು ಮಾತಾಡುವುದು ರಾಜಕೀಯಕ್ಕೆ ಸಂಬಂಧಪಟ್ಟದ್ದಲ್ಲ. ಇದು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಮಾತಾಡುತ್ತಿದ್ದೇನೆ. ನಮ್ಮ ರಾಜಕೀಯ ಧುರೀಣರು ಬೈಬಲನ್ನು ಬದಿಗಿಟ್ಟು ಅದರ ಸತ್ಯತೆಗಳನ್ನು ತಿರಸ್ಕರಿಸಿದ್ದಾರೆ. ಯಾವ ಮಾತಿಗೂ ಗೌರವ ಕೊಡುವುದಿಲ್ಲ. ಆದುದರಿಂದ ದೇವರು ನಮ್ಮ ಮೇಲೆ ಕೂಡಾ ಭ್ರಮೆಯ ಆತ್ಮವನ್ನು ಮೋಸತನವನ್ನು ಸುರಿದಿದ್ದಾನೆ.

ಸೈತಾನನ ಸುಳ್ಳು ಜಗತ್ತನ್ನು ಸುಳ್ಳು ಶಾಂತಿಗೆ ಕಂಬಳಿಯನ್ನು ಹಾಸಿ ಬಿಟ್ಟಿದ್ದಾನೆ. ಹಾಗಾಗಿ ನಾವು ಏನೂ ಮಾಡಿದರೂ ಒಳ್ಳೆಯದಾಗುತ್ತದೆ. ಯಾವ ಪರಿಣಾಮ ಕೂಡಾ ಆಗುವುದಿಲ್ಲ ಎಂಬ ಭ್ರಾಂತಿಗೆ ಒಳಗಾಗುತ್ತೇವೆ. ನಾವು ಈ ಭ್ರಾಂತಿಯ ಮೇರೆಯನ್ನು ದಾಟಿದ್ದೇವೆ. ಈಗ ನ್ಯಾಯ ತೀರ್ಪಿಗೆ ಒಳಗಾಗಿದ್ದೇವೆ.

ಪೌಲನು ಈ ನ್ಯಾಯ ತೀರ್ಪಿನ ಕುರಿತಾಗಿ ರೋಮಾಪುರ 1ನೇ ಅಧ್ಯಾಯದಲ್ಲಿ ತಿಳಿಸಿದ್ದಾನೆ. ಅವನು ಜನರು ಹೇಗೆ ಬೈಬಲಿನಲ್ಲಿರುವ ಸತ್ಯಕ್ಕೆ ಒಳಗಾಗಿದ್ದರು. ಅದರ ನಂತರ ಅನೀತಿಗೆ ಹೇಗೆ ಒಳಗಾದರು ಎಂಬುದನ್ನು ವಿವರವಾಗಿ ತಿಳಿಸುತ್ತಾನೆ. ಸ್ಪಷ್ಟವಾಗಿ ಹೇಳುವುದಾದರೆ ಅವರಿಗೆ ದೇವರ ವಾಕ್ಯ ಮತ್ತು ಲೋಕದ ಇಚ್ಛೆ ಆಶೆಗಳು ಎರಡೂ ಬೇಕಾಗಿದ್ದವು. ಅಂಥ ಮನಸ್ಸನ್ನು ದೇವರು ಬಲವಾಗಿ ಖಂಡಿಸಿದ್ದಾನೆ. ಅವರು ಸುಳ್ಳನ್ನು ನಂಬುತ್ತಾರೆ. ದೇವರು ಅಂಥವರನ್ನು ಬಲವಾದ ಭ್ರಮೆಗೆ ಒಳಪಡಿಸಿದ್ದಾನೆ.

ಅದೇ ವಿಷಯಗಳು ನಮ್ಮ ಆಲಯಗಳನ್ನು ಪ್ರವೇಶಿಸಿ ಅನೇಕ ವಿಶ್ವಾಸಿಗಳನ್ನು ಬೇಡವಾದ ವಿಷಯಗಳಲ್ಲಿ ಸೇರಿಸಿಕೊಂಡಿವೆ. ಒಂದು ಸಮಯದಲ್ಲಿ ಅವರ ಮನಸಾಕ್ಷಿ ಅವರನ್ನು ಚುಚ್ಚುತ್ತಿರಬಹುದು. ಈಗ ಅವರು ನಮ್ಮ ನಾಯಕರೆಲ್ಲ ಅದರೊಂದಿಗೆ ಸೇರಿಕೊಂಡಿದ್ದಾರೆ. ಎಲ್ಲರೂ ಇದರಲ್ಲಿ ಭಾಗವಹಿಸುತ್ತಾರೆ. ನಾನೇಕೆ ಭಾಗವಹಿಸಬಾರದು? ಅವರು ಸೈತಾನನ ಭ್ರಮೆಗೆ ಒಳಗಾಗಿದ್ದಾರೆ.

ಪೌಲನು ಹೀಗೆ ಎಚ್ಚರ ಕೊಡುತ್ತಿದ್ದಾನೆ - ಯಾಕೆಂದರೆ ಜನರು ಸ್ವಸ್ಥ ಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ. ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾಕಥೆಗಳನ್ನು ಕೇಳುವುದಕ್ಕೆ ಹೋಗುವರು. (2 ತಿಮೋಥಿ3:1).

ಮೋಸ ಹೋದ ಜನರು ಯಾರು? ಪೌಲನು ಯಾವ ಜನರ ಬಗ್ಗೆ ಮಾತಾಡುತ್ತಾನೆ? ಅವರು ಮೋಸ ಹೋದ ದೇವ ಜನರು. ಪೌಲನು ಈ ಪತ್ರಗಳನ್ನು ಥೆಸಲೋನಿಕ ಸಭೆಗಳಿಗೆ ಬರೆಯುತ್ತಾನೆ. ಹೊಸದಾಗಿ ಹುಟ್ಟಿದ ಕ್ರೈಸ್ತರಿಗೆ ಇದನ್ನು ಬರೆದು ತಿಳಿಸುತ್ತಾನೆ. ಈ ಜನರು ಸಂಪೂರ್ಣವಾಗಿ ಸತ್ಯ ವಿಷಯವನ್ನು ತಿಳಿದುಕೊಂಡವರು. ಒಂದು ಸಮಯದಲ್ಲಿ ಲೋಕದಲ್ಲಿರುವ ಆಶೆಗಳಿಗೆ ದೂರವಾದವರು ಈಗ ಅದರಲ್ಲೇ ಸಮಯ ಕಳೆಯಲು ಇಷ್ಟ ಪಡುವವರಾಗಿದ್ದಾರೆ.

**ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯದವನು ಆ ವಿಶ್ವಾಸಿಯು ದೊಡ್ಡ ಮೋಸಕ್ಕೆ ಒಳಗಾಗಿದ್ದಾನೆ!**

ಪೌಲನು ಗಲಾತ್ಯದವರಿಗೆ ಬರೆಯುವಾಗ - ಚೆನ್ನಾಗಿ ಓಡುತ್ತಾ ಇದ್ದಿರಿ. ನೀವು ಸತ್ಯವನ್ನು ಅನುವರ್ತಿಸದಂತೆ ಯಾರು ನಿಮ್ಮನ್ನು ತಡೆದರು? (ಗುಲಾತ್ಯ 5:7) ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ ಯಾರು ನಿಮ್ಮನ್ನು ಮರುಳುಗೊಳಿಸಿದರು? (3:1) ಪೌಲನು ತನ್ನ ಮಂದೆಗೆ ನಿಮಗೆ ಏನಾಗಿದೆ? ನೀವು ಇಷ್ಟರವರೆಗೆ ಸರಿಯಾಗಿ ನಡೆದುಕೊಂಡಿದ್ದೀರಿ. ಈಗ ನೀವು ಭ್ರಾಂತಿ ಹಿಡಿದವರ ಹಾಗೆ ಇದ್ದೀರಿ.

ಇಡೀ ಸತ್ಯವೇದದಲ್ಲಿ ನಾವು ದೇವರ ಮಾತಿಗೆ ಎಷ್ಟು ವಿಧೇಯರಾಗಬೇಕೆಂದು ಅದು ತಿಳಿಸಿಕೊಡುತ್ತದೆ. ಪೌಲ ಅರಸನ ಉದಾಹರಣೆಯನ್ನು ನೋಡುವುದಾದರೆ - ದೇವರು ಸಮುವೇಲ ಪ್ರವಾದಿಯ ಮುಖಾಂತರವಾಗಿ ನಿಖರವಾದ ಆಜ್ಞೆಯನ್ನು ಪರಿಪಾಲಿಸಲು ಕೊಟ್ಟಿದ್ದನು. ಈಗ ನೀನು ಹೋಗಿ ಅವರನ್ನು ಸೋಲಿಸಿ ಅವರಿಗಿರುವುದನ್ನೆಲ್ಲಾ ಸಂಪೂರ್ಣವಾಗಿ ಹಾಳು ಮಾಡು. ಗಂಡಸರನ್ನು, ಹೆಂಗಸರನ್ನು, ಮಕ್ಕಳನ್ನು, ಶಿಶುಗಳನ್ನು, ಎತ್ತು ಕುರಿ ಕತ್ತೆ ಒಂಟೆ ಇವುಗಳನ್ನು ಕನಿಕರವಿಲ್ಲದೆ ಕೊಂದು ಹಾಕು ಎಂದು ಹೇಳುತ್ತಾನೆ. ಅಂದನು. (1 ಸಮುವೇಲ 15:3).

ದೇವರಿಂದ ಪಡೆದುಕೊಂಡ ಈ ಆಜ್ಞೆಗೆ ರಾಜನಾದ ಪೌಲನು ಸರಿಯಾಗಿ ನಡೆದನೋ? ಅವನು ಅರಸನಾದ ಅಗಾಗನನ್ನು ಸಜೀವಿಯಾಗಿ ಹಿಡಿದು ಎಲ್ಲಾ ಜನರನ್ನು ಕತ್ತಿಯಿಂದ ಸಂಹರಿಸಿದನು. ಪೌಲನು ಇಸ್ರಾಯೇಲ್ಯರೂ ಅಗಾಗನನ್ನೂ ಮೇಲ್ತರದ ಕರು ದನಗಳನ್ನು, ಕುರಿಮರಿಗಳನ್ನು ಕೊಬ್ಬಿದ ಪಶುಗಳನ್ನು ಶ್ರೇಷ್ಠವಾದ ಎಲ್ಲಾ ಪದಾರ್ಥಗಳನ್ನು ನಾಶ ಮಾಡುವ ಮನಸ್ಸಿಲ್ಲದೆ ಉಳಿಸಿ ಪ್ರಯೋಜನವಿಲ್ಲದಂಥ ಹೀನವಾದವುಗಳನ್ನೆಲ್ಲಾ ಮಾಡಿ ಬಿಟ್ಟರು (1 ಸಮುವೇಲ 15:7-9).

ದೇವರು ಸೌಲನ ಕೈಯಲ್ಲಿ ಸರಿಯಾದ ಆಜ್ಞೆಯೊಂದಿಗೆ ಖಡ್ಗವನ್ನು ಕೊಟ್ಟಿದ್ದು ಯುದ್ಧಕ್ಕೆ ಹೋದಾಗ ಅಪೂರ್ಣವಾಗಿ ದೇವರ ಆಜ್ಞೆಯನ್ನು ಪಾಲಿಸಿದನು. ಎಲ್ಲರನ್ನು ಕಡಿದು ನಾಶ ಮಾಡುವುದರ ಬದಲು ರಾಜನಾದ ಆಗಾಗನನ್ನು ಕೊಲ್ಲಲಿಲ್ಲ. ಇಷ್ಟು ಮಾತ್ರವಲ್ಲದೆ ಕೆಲವು ಉಳಿದ ವಸ್ತುಗಳನ್ನು ಉಳಿಸಿಕೊಂಡನು.

ಸಮುವೇಲನು ಇದನ್ನು ನೋಡಿ ಬಹಳ ಪಶ್ಚಾತ್ತಾಪ ಪಟ್ಟನು. ದೇವರು ಆತನಿಗೆ ಹೊರಟು ಹೋಗಿ ದುಷ್ಟರಾದ ಅಮಾಲೇಕ್ಯರೊಡನೆ ಯುದ್ಧ ಮಾಡಿ ಅವರೆಲ್ಲರನ್ನು ಸಂಪೂರ್ಣವಾಗಿ ನಾಶ ಮಾಡು ಎಂದು ಹೇಳಿದನು. ಆದರೆ ನೀನು

ಯೆಹೋವನ ಮಾತನ್ನು ಕೇಳದೆ ಕೊಳ್ಳೆಗಾಗಿ ಎರಗಿ ಆತನಿಗೆ ದ್ರೋಹ ಮಾಡಿದ್ದೇಕೆ ಅಂದನು. (1ನೇ ಸಮುವೇಲ 15:18-19).

ಈ ಸಂದರ್ಭದಲ್ಲಿ ಸತ್ಯವೇದವು ನೇರವಾದ ಉತ್ತರವನ್ನು ಕೊಡುತ್ತದೆ. ಯೆಹೋವನು ಸಮುವೇಲನಿಗೆ - ಸೌಲನನ್ನು ಅರಸನನ್ನಾಗಿ ಮಾಡಿದ್ದಕ್ಕೆ ಈಗ ಪಶ್ಚಾತ್ತಾಪ ಪಡುತ್ತೇನೆ. ಅವನು ನನ್ನನ್ನು ಬಿಟ್ಟು ಬಿಟ್ಟನು. ನನ್ನ ಆಜ್ಞೆಗಳನ್ನು ನೆರವೇರಿಸುವುದಿಲ್ಲ ಎಂದು ಹೇಳಲು ಸಮುವೇಲನು ಕೋಪಗೊಂಡು ರಾತ್ರಿಯೆಲ್ಲಾ ಆತನಿಗೆ ಮೊರೆಯಿಟ್ಟನು (ವಚನಗಳು (10-11).

ಇದು ನಿನ್ನ ಜೀವನದ ಶೈಲಿಯನ್ನು ತೋರಿಸುತ್ತದೋ? ದೇವರು ನಿನ್ನ ಜೀವನ ಶೈಲಿಯಲ್ಲಿ ಬದಲಾವಣೆಯನ್ನು ತರಲು ಹೇಳಿದ್ದಾನೋ? ಇನ್ನೂ ಲೋಕದ ಇಚ್ಛೆ ಆಶೆಯಲ್ಲಿ ತೊಡಗಿಕೊಂಡು, ಅದನ್ನು ಬಿಡಲು ಆಗುವುದಿಲ್ಲವೋ?

ಈಗ ಅವನ ಆತ್ಮ ನಿನ್ನ ಹತ್ತಿರ ಮಂದವಾದ ಸ್ವರದಲ್ಲಿ ಎಚ್ಚರಿಸುತ್ತಾ ನಿನ್ನ ಮತ್ತು ನಮ್ಮ ಮಧ್ಯದಲ್ಲಿ ಈ ಆಶೆಯು ತೊಂದರೆಯನ್ನು ಕೊಡುತ್ತಾ ಇದೆ. ನನ್ನನ್ನು ಸ್ವೀಕರಿಸದಿದ್ದರೆ ನಿನಗೆ ಆಶೀರ್ವಾದ ಸಿಕ್ಕಲಾರದು. ನನ್ನ ಆತ್ಮವು ನಿನ್ನನ್ನು ಆಶೀರ್ವಾದಿಸಲು ತವಕಪಡುವುದು. ಈಗ ಸಮಾಧಾನದಿಂದ ಇರು. ಸ್ವಲ್ಪ ಹೊತ್ತಿನ ನಂತರ ದೇವರು ನಿನಗೆ ಕಠೋರವಾದ ಸ್ವರದಿಂದ ನಿನ್ನ ಇಚ್ಛೆ ಆಶೆಗಳನ್ನು ದೂರ ಮಾಡಲು ಮನಸ್ಸಿಲ್ಲದಿದ್ದರೆ, ನಾನು ಅದನ್ನು ಹೊರಪಡಿಸಿದಾಗ ಅದು ನಿನ್ನನ್ನು ನಾಶ ಮಾಡುವುದು.

ಸೌಲನ ಅವಿಧೇಯತೆಯನ್ನು ನೋಡಿ ದೇವರು ಅವನನ್ನು ಬಿಟ್ಟು ಬಿಟ್ಟನು. ಅವಿಧೇಯತ್ವವು ಮಂತ್ರ ತಂತ್ರಗಳಷ್ಟೇ ಕೆಟ್ಟ ದಾಗಿರುವುದು. ಹಟವು ಮಿಥ್ಯಾ ಭಕ್ತಿಗೂ ವಿಗ್ರಹಾರಾಧನೆಗೂ ಸಮಾನವಾಗಿರುವುದು. ನೀನು ಯೆಹೋವನ ಮಾತನ್ನು ತಳ್ಳಿ ಬಿಟ್ಟದ್ದರಿಂದ ಆತನು ನಿನ್ನನ್ನು ಅರಸುತನದಿಂದ ತಳ್ಳಿ ಬಿಟ್ಟಿದ್ದಾನೆ ಎಂದು ನುಡಿದನು (ವಚನ 3).

ದೇವರ ಆತ್ಮನು ಸೌಲನನ್ನು ಬಿಟ್ಟು ಹೋದನು. ಅರಸನ ಈ ರೀತಿಯ ಬೇಜವಾಬ್ದಾರಿತನ ಸೈತಾನನು ಒಳಹೋಗಲು ಅವಕಾಶ ಮಾಡಿಕೊಟ್ಟಿತು. ಕೂಡಲೇ ದುರಾತ್ಮವು ಸೌಲನನ್ನು ಬಾಧಿಸಲು ಪ್ರಾರಂಭಿಸಿತು. ಕೊನೆಗೆ ಅವನು ಒಂದು ಮಾಟಗಾರ್ತಿಯ ಹತ್ತಿರ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಿದನು.

ಸೌಲನ ಜೀವನ ಚರಿತ್ರೆಯನ್ನು ಓದುವಾಗ ಬಹಳ ಆಶ್ಚರ್ಯವಾಗುತ್ತದೆ. ಸೌಲನು ಆದಷ್ಟು ಒಳ್ಳೆಯ ಹೆಸರನ್ನು ಪಡೆಯಲು ಪ್ರಯತ್ನಿಸಿದನು. ಅಷ್ಟೊಂದು ಕೆಟ್ಟದಾಗಿಯೂ ಅವನು ಮಾಡಲಿಲ್ಲ. ದೇವರು ಯಾಕೆ ಅವನನ್ನು ಕ್ರೂರವಾಗಿ ಬಾಧಿಸಿದನು? ಪೌಲನನ್ನು ಅವನು ಯಾಕೆ ಕ್ಷಮಿಸಲಿಲ್ಲ?

ಈ ಪ್ರಸಂಗದ ದೇವರು ನಮಗೆ ಒಂದು ಎಚ್ಚರಿಕೆಯನ್ನು ಹೇಳುವವನಾಗಿದ್ದಾನೆ. ಆತನು ಹೇಳುತ್ತಿದ್ದಾನೆ - ನಿನ್ನ ವಿಧೇಯತೆಯು ನನಗೆ ಎಷ್ಟು ಪ್ರಿಯವಾದದ್ದೆಂದು ತೋರಿಸಿ ಕೊಡುತ್ತದೆ. ನನಗೆ ನಿನ್ನ ಪೂರ್ಣ ಹೃದಯ, ಪೂರ್ಣ ಪ್ರೀತಿ - ಅರ್ಧವಾದ ವಿಧೇಯತೆ ಬೇಡವೇ ಬೇಡ. ದೇವರು ಸೌಲನಿಗೆ ಮಾಡಿದ ಪ್ರಕಾರ ನಮಗೂ ಹಾಗೆಯೇ ಮಾಡುವನು. ದೇವರು ನಮ್ಮೊಂದಿಗೆ ಮಾತಾಡಿದ್ದಾನೆ. ಆತನ ಆಜ್ಞೆಗಳೇನೆಂದು ನಮಗೆ ಗೊತ್ತಿದೆ. ಆತನು ತನ್ನ ವಾಕ್ಯದ ಮುಖಾಂತರವಾಗಿ ತನ್ನ ಆತ್ಮನ ಮೂಲಕ ನಮ್ಮ ಹೃದಯಗಳಲ್ಲಿ ಇದ್ದುಕೊಂಡು ತಿಳಿಸಿದ್ದಾನೆ.

ದೇವರು ಸೌನಿಗೆ ಹಳೇ ಒಡಂಬಡಿಕೆಯಲ್ಲಿ ಕಾನೂನಿನಿಗೆ ಸರಿಯಾಗಿ ಮಾಡಿದ್ದಾನೆ. ನಾವೀಗ ಕೃಪೆಯ ಕಾಲದಲ್ಲಿದ್ದೇವೆ. ಸೌಲನಿಗೆ ದೇವರು ಅವಿಧೇಯನಾದಾಗ ವರ್ತಿಸಿದ ಹಾಗೆ ನಮಗೆ ವರ್ತಿಸಲಿಕ್ಕಿಲ್ಲ.

ಹೊಸ ಒಡಂಡಬಿಕೆಯ ಕಾಲದಲ್ಲಿ ದೇವರು ನಮ್ಮನ್ನು ಕೃಪೆಯ ಕಾಲದಲ್ಲಿಟ್ಟಿದ್ದಾನೆ. ದೇವರು ಪ್ರತಿಯೊಬ್ಬನಿಗೂ ಆತನ ಕೃತ್ಯಗಳ ಪ್ರಕಾರ ಫಲಗಳನ್ನು ಕೊಡುವನು. ಯಾರ ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯ ಜೀವವನ್ನು ಕೊಡುವನು. ಯಾರೂ ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು. ಕೆಟ್ಟದ್ದನ್ನು ನಡೆಸುವ ಪ್ರತಿಯೊಬ್ಬ ನರ ಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು. ಯೆಹೋದ್ಯರಿಗೆ ಮೊದಲು ಅನಂತರ ಗ್ರೀಕರಿಗೆ ಸಹ ದೇವರಿಗೆ ಪಕ್ಷಪಾತವಿಲ್ಲ (ರೋಮಾಪುರ 2:6-11).

ಹಳೆ ಒಡಂಬಡಿಕೆಯಲ್ಲಿರುವ ಸೌಲನಿಗೂ ಹೊಸ ಒಡಂಬಡಿಕೆಯಲ್ಲಿರುವ ವಿಶ್ವಾಸಿಗಳಿಗೂ ನಾನು ಇರುವ ವ್ಯತ್ಯಾಸಗಳನ್ನು ತಿಳಿಸುತ್ತೇನೆ. ನಿಜವಾಗಿಯೂ ದೇವರ ಆಜ್ಞೆಗಳಿಗೆ ವಿಧೇಯನಾಗಿರಲು ಮತ್ತು ಆತನ ವಾಕ್ಯವನ್ನು ಕೇಳಿ ಪ್ರೀತಿಸಿ ಗೌರವಿಸುವುದಾದರೆ ಪವಿತ್ರಾತ್ಮನು ಆತನಿಗೆ ಬೇಕಾದ ಶಕ್ತಿ ಬಲವನ್ನು ಕೊಟ್ಟು ಎಲ್ಲವನ್ನು ಒದಗಿಸಿ ಕೊಡುವನು. ಹೊಸ ಒಡಂಬಡಿಕೆಯ ಇದು ಒಂದು ಅವಿಭಾಜ್ಯ ಅಂಗವಾಗಿದೆ.

ಪೌಲನಲ್ಲಿ ಒಳ್ಳೆಯ ಅಭಿಪ್ರಾಯ ಇರಲಿಲ್ಲ. ದೇವರಲ್ಲಿ ನಿಜವಾದ ಪ್ರೀತಿ, ಗೌರವ ವಿಧೇಯತೆಗಳಿದ್ದರೆ ಅವಿಶ್ವಾಸಿಯು ಇಚ್ಛೆ ಆಶೆಗಳನ್ನು ಸುಲಭದಲ್ಲಿ ಗೆಲ್ಲಲು ಸಾಧ್ಯವಾಗುತ್ತದೆ. ಪವಿತ್ರಾತ್ಮನ ಶಕ್ತಿಯಿಂದ ಆತನು ಪಾಪಗಳ ಶಕ್ತಿಯನ್ನು ಕಡಿಮೆ ಮಾಡಲು ಸಾಧ್ಯವಿದೆ.

## ಸುದ್ದಿಗಳು (News)

## ಹೊರಗೆ ಬಾ... ನಿನ್ನನ್ನು ಸುಡುತ್ತೇವೆ!

ಅಂಬಾಲಾ, ಹರಿಯಾನ : ಅಸೆಂಬ್ಲಿಸ್ ಆಫ್ ಗಾಡ್ ಅದರ ಪಾಸ್ಟರ್ ಅವಿಯೊಂಶ್ ಕಾಲ್ರ 32 ವರ್ಷ ದೇವ ಸೇವಕ ಮೂರ್ತಿ ಪೂಜೆಗೆ ವಿರೋಧವಾಗಿದ್ದುಕೊಂಡು ಬಲವಂತದಿಂದ ಮತಾಂತರಗೊಳಿಸುವ ಅಪವಾದವನ್ನು ಅವರ ಮೇಲೆ ಹಾಕಿ ಕುಟುಂಬ ಸಮೇತ ಮನೆಯಿಂದ ಎಕ್ಸ್‌ಟ್ರಿಮೇಟ್ಸಿನವರು (Extremists) ಎಳೆದು ಹೊರಗೆ ಹಾಕಿದ್ದಾರೆ. ಜುಲೈ 11 ರಂದು ಸುಮಾರು 200 ಮಂದಿಯ ಗುಂಪು ಮನೆಯ ಹೊರಗೆ ನಿಂತು ಹೊರಗೆ ಬನ್ನಿರಿ. ನಿಮ್ಮನ್ನು ಬಿಡುವುದಿಲ್ಲ. ನಿಮ್ಮನ್ನು ಸುಟ್ಟು ಹಾಕುತ್ತೇವೆ ಎಂಬ ಬೆದರಿಕೆಯನ್ನು ಹಾಕಿದ್ದಾರೆ. ಸ್ಥಳೀಯ ಪೊಲೀಸರು ವಿಚಾರಣೆಗೆ ಈ ವಿಷಯವನ್ನು ಮುಂದಿಟ್ಟಿದ್ದಾರೆ. ಸ್ಥಳೀಯ ಸಭೆಯಲ್ಲಿ 100 ಮಂದಿ ಸದಸ್ಯರಿದ್ದು 2014 ರಲ್ಲಿ ಸ್ಥಾಪನೆಗೊಂಡಿತ್ತು. ಸುಮಾರು 300 ಮಂದಿ ಕ್ರೈಸ್ತರು ತಮಗಾದ ಅನ್ಯಾಯವನ್ನು ಪ್ರತಿಭಟಿಸಿ ತಮಗೆ ನ್ಯಾಯ ಮತ್ತು ರಕ್ಷಣೆಯನ್ನು ಕೊಡಬೇಕೆಂದು ಹೀಗೆ ಕ್ರೈಸ್ತರಿಗೆ ಆಗುವ ಅನ್ಯಾಯವನ್ನು ತಪ್ಪಿಸಬೇಕು, ಮೈನೋರಿಟಿ ಜನಾಂಗಗಳನ್ನು ಅಭಿವೃದ್ಧಿಗೆ ತರಬೇಕೆಂದು ಬೇಡಿಕೆಗಳನ್ನು ಹಾಕಿದ್ದಾರೆ

**– ಎಮ್.ಎಸ್.ಎನ್.**

ಫೋರ್ ರನ್ನರ್ (ಅಕ್ಟೋಬರ್ 2018)

ಪೌಲನು ವಿಶ್ವಾಸಿಗಳಿಗೆ ಹೀಗೆ ಎಚ್ಚರಿಕೆಯನ್ನು ಕೊಡುತ್ತಾನೆ - ಎಲೈ ಮನುಷ್ಯನೇ ಅಂಥವುಗಳನ್ನು ನಡೆಸುವವರಲ್ಲಿ ದೋಷವನ್ನು ಎಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೆನೆಂದು ಯೋಚಿಸುತ್ತೀಯೋ? (ರೋಮಾಪುರ 2:3) ಆತನು ಹೇಳುತ್ತಾನೆ - ನೀನು ನಿನ್ನನ್ನು ಕ್ರೈಸ್ತನನ್ನಾಗಿ ಎಲ್ಲರೂ ದೇವರ ಆಜ್ಞೆಗಳನ್ನು ವಿಧೇಯನಾಗಿ ಪಾಲಿಸಬೇಕೆಂದು ನೀನು ಪರೀಕ್ಷೆ ಮಾಡಿಕೊಳ್ಳುತ್ತೀಯಾ? ನೀನು ವ್ಯಭಿಚಾರದಲ್ಲಿದ್ದೀಯಾ? ಆತನ ಅಪಾರವಾದ ದಯಾ ಸಹನ, ದೀರ್ಘ ಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವುದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬುದು ನಿನಗೆ ಗೊತ್ತಿಲ್ಲವೇ? (ವಚನ 4) ದೇವರು ಕರುಣೆಯುಳ್ಳವನು. ದಯಾಳು, ಪ್ರೀತಿ ಪೂರ್ವಕನಾಗಿದ್ದಾನೆ. ಅದರ ಮುಖಾಂತರವಾಗಿ ನೀನು ಇಂದು ರಕ್ಷಿಸಲ್ಪಟ್ಟೀದ್ದಿ.

## ಈ ಪ್ರಸಂಗದ ಮುಖ್ಯ ಉದ್ದೇಶಗಳು ಯಾವುವು?

ನಾನು ನಿಮಗೆ ಇದನ್ನು ಹೇಳಲು ಇಷ್ಟಪಡುತ್ತೇನೆ. ಚರಿತ್ರೆಯಲ್ಲಿ ದೊಡ್ಡದಾದ ವೃದ್ಧಿಯ ಪ್ರಸಂಗಕಾರನು ಬಂದಾಗ ಅಂತ್ಯಕ್ರಿಸ್ತನು ಪ್ರಸಿದ್ಧಿಗೆ ಬರುವನು. ಆತನ ಸಂಘದಲ್ಲಿ ಸೇರಿಸಲು ಸೈತಾನನು ಅರ್ಧ ಅವಿಧೇಯರಾದ ವಿಶ್ವಾಸಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಸೇರಿಸಲು ಬಿಟ್ಟುಕೊಡಿಸುತ್ತಿದ್ದಾನೆ. ಇದರಲ್ಲಿ ಯಾವ ಕಷ್ಟವೂ ಇರುವುದಿಲ್ಲ. ಜನರು ಮುಂದೆ ಬಂದು ಈ ಗುಂಪುಗಳಲ್ಲಿ ಸೇರಿಕೊಳ್ಳುವರು. ಇಷ್ಟು ಮಾತ್ರವಲ್ಲದೆ ಹೆಚ್ಚಿನ ಸಂಖ್ಯೆಗಳಲ್ಲಿ ಕ್ರೈಸ್ತರು ಕೂಡಾ ಸೇರಿಕೊಳ್ಳುವರು. ಅವರು ಸೈತಾನನ ತಂತ್ರಗಳಲ್ಲಿ ಬೀಳುವರು.

ಹಿಟ್ಲರನ ಸಮಯದಲ್ಲಿ ಅನೇಕ ಜರ್ಮನ್ ಕ್ರೈಸ್ತರಿಗೆ ಈ ಸ್ಥಿತಿ ಒದಗಿ ಬಂತು. ಹಿಟ್ಲರನು ಅಧಿಕಾರಕ್ಕೆ ಬಂದಾಗ, ಎಲ್ಲಾ ಕ್ರೈಸ್ತ ವಿಶ್ವಾಸಿಗಳು, ಲೂಥರ್ಸ್‌ನವರು ಮತ್ತು ಪೆಂತೆಕೋಸ್ತಿನವರು ಆತನನ್ನು ಸ್ವೀಕರಿಸಿದರು. ಸಮಾಜದಲ್ಲಿ ಅವನು ಕೆಟ್ಟ ಕೆಲಸಗಳನ್ನು ನಡೆಸುವಾಗ ಅವರು ಬೇರೆ ಕಡೆಗೆ ನೋಡಿ ದೇವರ ಮಾತಿನ ಸತ್ಯತೆಯನ್ನು ಧಿಕ್ಕರಿಸಿದರು. ಸಭೆಗಳಲ್ಲಿ ಸುವಾರ್ತೆಗಳಿಗೋಸ್ಕರ ದೊಡ್ಡ ಸ್ವರ ಕೇಳಿಸಲಾರಂಭಿಸಿತು. ಆದರೆ ಹೆಚ್ಚಿನ ಸಂಖ್ಯೆಯ ಕ್ರೈಸ್ತರು ಹಿಟ್ಲರನೇ ರಾಜನೆಂದು ಹೇಳಿ ಅವನನ್ನು ಅಭಿನಂದಿಸಿದರು. ಅವರು ಸುಳ್ಳನ್ನು ಅಳವಡಿಸಿಕೊಂಡಿದ್ದರಿಂದ ದೇವರು ಅವರನ್ನು ಭ್ರಮೆಗೆ ಒಳಪಡಿಸಿದನು.

ನಾನು ನಿಮ್ಮನ್ನು ಕೇಳುತ್ತೇನೆ - ನಿಮ್ಮ ಮಗನನ್ನು ವ್ಯಕ್ತಪಡಿಸುವ ಒಳ್ಳೆಯ ಪ್ರಸಂಗಕ್ಕಾಗಿ ನೀವು ಕೂತುಕೊಂಡಿರುತ್ತೀರಾ? ಆ ಮಾತು ನಿಮಗೆ ಮನವರಿಕೆ ಮಾಡಿಕೊಳ್ಳುವಂತೆ ಒಪ್ಪಿಸಿಕೊಡುತ್ತೀರೋ? ಅಥವಾ ನಿಮ್ಮ ಇಚ್ಛೆ ಆಶೆಗಳಿಗೆ ಮನಸೋತು ಹೋಗುತ್ತೀರೋ?

ಪವಿತ್ರಾತ್ಮನು ಕೊಡುವ ಎಚ್ಚರಿಕೆಗಳನ್ನು ನೀವು ತಿರಸ್ಕರಿಸಿದರೆ, ದೇವರ ಆಜ್ಞೆಗಳನ್ನು ನೀವು ಪ್ರತಿ ಸಾರಿ ತಿರಸ್ಕರಿಸಿದರೆ - ನೀವು ಸುಲಭವಾಗಿ ಅಂತ್ಯಕ್ರಿಸ್ತನ ಸೇನೆಯೊಳಗೆ ಸೇರಿ ಹೋಗುವಿರಿ. ಸೈತಾನನು ಗುಪ್ತವಾಗಿ ನಿಮ್ಮನ್ನು ದುಷ್ಟತ್ವಕ್ಕೆ ಎಳೆದುಕೊಂಡು ಹೋಗುವನು. ಅದ್ಭುತ ಚಮತ್ಕಾರಗಳನ್ನು ಮಾಡುವ ಅಂತ್ಯಕ್ರಿಸ್ತನು ಬಂದಾಗ ನಾವು ಸುಳ್ಳಿನಿಂದ ಮುಚ್ಚಿ ಹೋಗಿ ಭ್ರಮೆಗೆ ಒಳಗಾಗುವಿರಿ.

ದೇವರ ವಾಕ್ಯವನ್ನು ಪ್ರೀತಿಸದ ಅವಿಧೇಯ ವಿಶ್ವಾಸಿಗಳಿಗೆ ಪೌಲನು ಹೇಳುವುದೇನಂದರೆ - ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದ ಪಡುವವರೆಲ್ಲರೂ ಈ ಪ್ರಕಾರ ನ್ಯಾಯ ತೀರ್ಪಿಗೆ ಒಳಗಾಗುವರು. (2 ಥೆಸಲೋನಿಕ 2:12) ಸತ್ಯವನ್ನು ತಿಳಿದವರು ಅದನ್ನು ಬಿಟ್ಟು ಅನೀತಿಯನ್ನು ನಂಬುವರಿಗೆ ದೇವರು ನ್ಯಾಯ ತೀರ್ಪಿಗೆ ಒಳಪಡಿಸುವನು.

ದೇವರನ್ನು ನಂಬದೆ, ಪ್ರೀತಿಸದೆ ಅವಿಧೇಯರಾಗಿ ಇರುವವರಿಗೆ ಈ ಪರಿಣಾಮಗಳಾಗುವವು.

1. ಪಾಪದಿಂದ ಅವರ ಹೃದಯವು ಕಲ್ಲಾಗುವುದು. ವಂಚನೆಯಿಂದ ಕೂಡಿದ ಹೃದಯವರು.
2. ಆ ಹೃದಯದಿಂದ ಸೈತಾನನು ತನ್ನ ಕೆಲಸ ಮಾಡುವನು. ಯಾವ ಶಿಕ್ಷೆಗೂ ಹೆದರುವುದಿಲ್ಲ.
3. ದೇವರು ಈ ಹೃದಯವನ್ನು ಮಾರ್ಪಾಡಿಸಲು ಸಾಧ್ಯವಾಗದೇ ಇದ್ದಾಗ ಅವನನ್ನು ಸೈತಾನನ ಕೈಗೆ ಒಪ್ಪಿಸಿ ಬಿಡುತ್ತಾನೆ.
4. ಸುಳ್ಳು ವಿಶ್ವಾಸಿಗೆ ಪಾಪ ಮಾಡಿದಾಗ ಯಾವ ಶಿಕ್ಷೆಯೂ ಇಲ್ಲ ಎಂದು ಅಭ್ರಮೆಗೆ ಅವನನ್ನು ಕುರುಡು ಮಾಡಿ ಬಿಡುತ್ತದೆ.
5. ಈಗ ವಿಶ್ವಾಸಿಯು ದುಷ್ಟ ಶಕ್ತಿಗಳಿಗೆ ಬಲಿಯಾಗಿ ಒಳ್ಳೆಯದು ಕೆಟ್ಟದಾಗಿದೆ. ಕೆಟ್ಟದು ಒಳ್ಳೆಯದಾಗಿದೆ ಎಂದು ನಂಬುವ ಸ್ಥಿತಿಗೆ ಬರುತ್ತಾನೆ.
6. ದೇವರಿಂದ ಮತ್ತು ಸತ್ಯದಿಂದ ಬಹಳ ದೂರ ಹೋಗುತ್ತಾನೆ ಮತ್ತು ಅಂತ್ಯಕ್ರಿಸ್ತನೇ ದೇವರೆಂದು ಹೇಳಿ ಅವನನ್ನು ಆರಾಧಿಸಲು ಪ್ರಾರಂಭಿಸುತ್ತಾನೆ.
7. ನ್ಯಾಯ ತೀರ್ಪಿನ ದಿನ ಅಂಥವನಿಗೆ ದೇವರು ನನ್ನ ಬಳಿಯಿಂದ ದೂರ ಹೋಗು ಮೋಸದ ವಂಚನೆಯುವನ ಸಂಗಡ ಹೋಗು ಎಂದು ಹೇಳುವನು.

ನಮಗೆ ಇದು ಸರಿಯಾದ ದಾರಿಯಲ್ಲ. ನಮ್ಮಿಂದ ಎಲ್ಲಾ ಭ್ರಮೆಗಳನ್ನು ತೆಗೆದು ಹಾಕಲು ದೇವರು ನಮಗೆ ಬಲವಾದ ವಾಗ್ದಾನಗಳನ್ನು ಕೊಟ್ಟಿದ್ದಾನೆ. ಪಾಪದ ಮೇಲೆ ಜಯವನ್ನು ತಾನು ಕ್ರೂಜೆಗೆ ಹೋಗಿ ಸುರಿಸಿದ ರಕ್ತದಿಂದ ವಿಮೋಚಿಸಿದ್ದಾನೆ. ನಾವು ಪಾಪಕ್ಕೆ ದಾಸನಾಗುವುದಿಲ್ಲ ಎಂದು ಅರಿಕೆ ಮಾಡಿಕೊಳ್ಳಬೇಕು. ನಾನು ಅದರ ವಿರೋಧವಾಗಿ ನಡೆಯುತ್ತೇನೆ. ನಿನ್ನ ಆತ್ಮನಿಂದ ನನ್ನನ್ನು ರಕ್ಷಿಸು ಎಂದು ದೇವರಿಂದ ಬೇಡಿಕೊಳ್ಳಬೇಕು. ಆತನು ನಿಮ್ಮ ಈ ಪ್ರಾರ್ಥನೆಗಳನ್ನು ಕೇಳಿದಾಗ ಕೂಡಲೇ ಆತನು ಪವಿತ್ರಾತ್ಮನ ಶಕ್ತಿ ಮತ್ತು ಬಲವನ್ನು ಪರಲೋಕದಿಂದ ಕೃಪೆಯನ್ನು ಕಳುಹಿಸಿ ಕೊಡುವನು. ಆಗ ಅಲ್ಲಿ ಸೈತಾನನು ನಿಲ್ಲಲು ಸಾಧ್ಯವಾಗುವುದಿಲ್ಲ.

ಈಗಲೇ ದೇವರ ಹತ್ತಿರ ನೇರವಾಗಿ ಆತನ ವಾಕ್ಯಗಳಿಗೆ ಗೌರವ ಕೊಡಲು ಕಲಿಸುವಂತೆ ಪ್ರಾರ್ಥಿಸಿರಿ. ವಾಕ್ಯಗಳನ್ನು ಸರಿಯಾಗಿ ಓದಿ ಮನನ ಮಾಡುವಂತೆ ಆತನನ್ನು ಬೇಡಿಕೊಳ್ಳಿರಿ. ಆತನು ಹೇಳುವುದನ್ನು ಸರಿಯಾಗಿ ಹೃದಯದಲ್ಲಿ ಮನದಟ್ಟು ಮಾಡುವಂತೆ ದೇವರಲ್ಲಿ ಪ್ರಾರ್ಥಿಸಿರಿ ಮತ್ತು ಅದನ್ನು ಬಲವಾಗಿ ನಂಬಿರಿ.

ರೆವೆರಂಡ್ ಡೇವಿಡ್ ವಿಲ್ಕರ್‌ಸನ್.

●●●


**ಕರೆಯ ಪ್ರತಿಧ್ವನಿ ಪತ್ರಿಕೆಯಲ್ಲಿ ಜಾಹೀರಾತಿನ ಕ್ರಯ :**

| ಸೈಜ್ | ಪ್ರತಿ ಭಾಷೆಗೆ | 16 ಭಾಷೆಗಳಲ್ಲಿ |
|---|---|---|
| ಕಾಲು ಪುಟ | ರೂ. 2,000 | ರೂ. 30,000 |
| ಅರ್ಧ ಪುಟ | ರೂ. 3,500 | ರೂ. 50,000 |
| ಸಂಪೂರ್ಣ ಪುಟ | ರೂ. 5,000 | ರೂ. 70,000 |



# ಹಳ್ಳದಿಂದ ಅರಮನೆಗೆ

# PIT TO PALACE

**(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)**

**"ಭೂಮ್ಯಾಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ನನ್ನ ಸಹಾಯವು ಬರುತ್ತದೆ" (ಕೀರ್ತನೆ 121:2)**

**"ಯೆಹೋವನು ನೀತಿವಂತರನ್ನು ಕಟಾಕ್ಷಿಸುತ್ತಾನೆ. ಅವರು ಮೊರೆಯಿಡುವಾಗ ಕಿವಿಗೊಡುತ್ತಾನೆ. ಕೀರ್ತನೆಗಳು" (34:15)**

ಈ ದಿನ ನಾನು ಬೆಳಿಗ್ಗೆ ಪ್ರಾರ್ಥನೆ ಮಾಡುವಾಗ ದೇವರು ನನ್ನನ್ನು ನನ್ನ ಮುಂಚಿನ ಪ್ರಾರಂಭದ ಸೇವೆಯ ಕಡೆಗೆ ಗಮನವನ್ನು ಸೆಳೆದನು. ಆಗಿನಿಂದ ಈಗಿನವರೆಗೆ ಯಾವ ರೀತಿಯಲ್ಲಿ ದೇವರು ನನ್ನನ್ನು ನಡೆಸಿದನು ಎಂಬುದಾಗಿ ತೋರಿಸಿಕೊಟ್ಟನು.

ನನಗೆ ಒಬ್ಬ ಸ್ನೇಹಿತನಾದ ಶ್ರೀಮಾನ್ ಪಿ. ಶಿವಪ್ರಕಾಶಂ ಬರೆದ ಒಂದು ಪತ್ರದಿಂದ ದೇವರು ನನ್ನನ್ನು ಯಾವ ರೀತಿಯಲ್ಲಿ ನಡೆಸಿದನು ಎಂಬುದಾಗಿ ತಿಳಿದು ಬರುತ್ತದೆ.

ಪ್ರೀತಿಯ ಸಹೋದರ ಸ್ಯಾಮ್ ಸೆಲ್ವರಾಜ್,

ನಿನ್ನ ದೇವರ ಸೇವೆಯ ಚಟುವಟಿಕೆಗಳ ಕುರಿತಾಗಿ ಒಂದು ಪತ್ರ ಬರೆಯಬೇಕೆಂದು ಆಶಿಸುತ್ತೇನೆ. ಸುವರ್ಣ ಮಹೋತ್ಸವದ ಆಚರಣೆಯನ್ನು ಸಂಸ್ಥೆಯಾದ **ಕರೆಯ ಪ್ರತಿಧ್ವನಿ** ಮತ್ತು ಮಾಸ ಪತ್ರಿಕೆಯ ಕುರಿತಾಗಿ ಆತುರ ಪಡುತ್ತೇನೆ. ನನಗೆ ಮನ ಬಂದ ವಿಷಯಗಳನ್ನು ತಿಳಿಸಲು ಸಂತೋಷ ಪಡುತ್ತೇನೆ.

ಮೊತ್ತಮೊದಲಾಗಿ ನೀನು ಸ್ಥಾಪಕ ಮತ್ತು ಮುಖ್ಯ ಸಂಪಾದಕನಾಗಿ ಕರೆಯ **ಪ್ರತಿಧ್ವನಿಯ ಸಂಸ್ಥೆಯ** ಸಂಚಾಲಕನಾದ ನಿನ್ನನ್ನು ಹೃದಯ ಪೂರ್ವಕವಾಗಿ ಅಭಿನಂದಿಸುತ್ತೇನೆ. ಅನೇಕ ಕಷ್ಟ ಕಾರ್ಪಣ್ಯಗಳನ್ನು ಜಯಿಸಿ ಬಂದವನಾಗಿದ್ದಿ. 2019 ನೇ ಸುವರ್ಣ ಮಹೋತ್ಸವ ಸಂಭ್ರಮವನ್ನು ಕಾಣುವಂಥ ಸೌಭಾಗ್ಯವನ್ನು ಕೊಟ್ಟದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ! ಕಾರ್ಯಾಲಯದ ಆಫೀಸರ್ಸ್, ಕಾರ್ಮಿಕರು ಪ್ರತಿಯೊಬ್ಬರಿಗೂ ನನ್ನ ಹೃದಯ ಪೂರ್ವಕವಾದ ವಂದನೆಗಳು.

ನೀನು ಸಣ್ಣ ಊರಾದ ಕನ್ಯಾಕುಮಾರಿಯಲ್ಲಿ ಜನಿಸಿದರೂ ಕೂಡಾ ಆ ಕಮ್ಯುನಿಸ್ಟ್‌ನವರ ಮಧ್ಯೆ ಇದ್ದು ಅನೇಕ ನಿಂದೆ ಹಿಂಸೆ ಅಪಹಾಸ್ಯ ಅಪವಾದಗಳನ್ನು ದೇವರ ಸೇವೆಯಲ್ಲಿ ತಾಳಿಕೊಂಡು ಈ 50 ವರ್ಷಗಳನ್ನು ದಾಟಿ ಬಂದಿದ್ದಿ. ನೀನು ನಿಜವಾಗಿಯೂ ದೇವರ ಆಶೀರ್ವಾದವನ್ನು ಕಾಣುತ್ತಾ ಇದ್ದಿ. ಯಾಕೆಂದರೆ ಅಷ್ಟೊಂದು ಕಷ್ಟಗಳನ್ನು ಶಾಂತಿ ಸಮಾಧಾನ ತಾಳ್ಮೆಯಿಂದ ಗೆದ್ದುಕೊಂಡಿದ್ದಿ.

ನಾವು ಮೊದಲು ಒಟ್ಟಾಗಿ ಗವರ್ನಮೆಂಟು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದೇವು. ಅಲ್ಲಿಂದ 40 ವರ್ಷಗಳು ದಾಟಿ ಹೊದವು. ನೀನು ನನ್ನ ಕಹಿ ಮತ್ತು ಸಿಹಿ ಅನುಭವಗಳನ್ನು ನೇರವಾಗಿ "ಹಳ್ಳದಿಂದ ಅರಮನೆಗೆ" ಪ್ರಕಟಿಸುತ್ತಾ ಬರುತ್ತಿದ್ದಿ. ಅದು **ಕರೆಯ ಪ್ರತಿಧ್ವನಿ** ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. ಆ ಅನುಭವಗಳು ಸತ್ಯವಾದದ್ದು ಮತ್ತು ಅದು ನಿನಗೆ ಅನೇಕ ಅನುಭವಗಳನ್ನು ಕೊಟ್ಟಿದೆ.

ನಿನ್ನ ಕಷ್ಟಕರವಾದ ಕೆಲಸವನ್ನು ನೋಡಿ ಬಹಳ ಹೆಮ್ಮೆ ಪಡುತ್ತೇನೆ. ನಿನ್ನ ಆ ಅಚಲವಾದ ನಂಬಿಕೆ ನಿನ್ನನ್ನು ಉನ್ನತ ಮಟ್ಟಕ್ಕೆ ಏರಿಸಿದೆ.

ನಾನು ಯಾರೊಂದಿಗೂ ಪೈಪೋಟಿಯನ್ನು ಇಡಲಿಲ್ಲ. ಯಾರೂ ನಿನ್ನನ್ನು ಕೆಳಗೆ ಹಾಕಲು ಪ್ರಯತ್ನಿಸಲಿಲ್ಲ. ನೀನು ದೇವರನ್ನು ನಂಬಿ ಕೆಲಸವನ್ನು ಮಾಡಿದ್ದಿ. ಎಲ್ಲಾ ಕಡೆಯಲ್ಲಿ ಹಬ್ಬಲು ಈ ಕೆಲಸವನ್ನು ಪ್ರಾರಂಭ ಮಾಡಿದ್ದಿ. ಅನೇಕ ಸಂಕಷ್ಟಗಳನ್ನು ಎದುರಿಸಿದ್ದಿ. ಪ್ರೀತಿಯನ್ನು ಸಂಪಾದನೆ ಮಾಡಿದ್ದಿ. ಈ ವಿಜಯದ ಮಟ್ಟವನ್ನು ಸಂಪಾದಿಸಿಕೊಂಡಿರುವಿ. ಬೇರೆಯವರ ಆಶ್ವಾಸನೆಗಿಂತ ನಾವೇ ಯೋಜನೆ ಹಾಕಿ ಕೆಲಸ ಮಾಡುವುದು ಉತ್ತಮವಾಗಿದೆ. ನಿನ್ನ ಯೋಜನೆಗಳನ್ನು ನೋಡುವಾಗ ಅದು ಶಿಸ್ತುಬದ್ಧವಾದ ಮಹನ್ನೋತ್ತವಾದ ಉದಾಹರಣೆಯಾಗಿದೆ. ನಮಗೂ ಒಂದು ಒಳ್ಳೆಯ ಮಾದರಿಯಾಗಿದೆ. ನಿನ್ನ ಉದ್ದೇಶ ಏನಂದರೆ ಈ ದಿನದ ಕೆಲಸ ಈ ದಿನವೇ ಮಾಡು. ನಾಳೆಯ ಕೆಲಸದ ಬಗ್ಗೆ ಈ ದಿನವೇ ಚಿಂತಿಸು. ಇದನ್ನು ನೋಡುವಾಗ ನೀನು ಯಾರು ಎಂದು ಈಗಲೇ ತಿಳಿಯುತ್ತದೆ. ಯಾರಿಗೆ ಹೇಗೆ ಬೇಕಾದ ಹಾಗೆ ನೀನು ಇದ್ದಿ. ಗೌರವಸ್ಥರಿಗೆ ಗೌರವವನ್ನು ಕೊಡುವವನಾಗಿ ಜೋರಿನವರಿಗೆ ಜೋರಾಗಿಯೂ ಇದ್ದಿ. ನಿನ್ನ ಹತ್ತಿರ ಒಳ್ಳೆಯ ನಾಟಕನ ಮತ್ತು ಅಧಿಕಾರದ ಶಿಕ್ಷಣ ಮಟ್ಟವು ಸರಿಯಾಗಿಯೇ ಇದೆ.

ನೀನು ಮತ್ತು ನಾನು ಗವರ್ನಮೆಂಟು ಆಫೀಸಿನಲ್ಲಿ ಕೆಲಸ ಮಾಡುತ್ತಿರುವಾಗ ಎಲ್ಲರೂ ನಿನ್ನನ್ನು ಗೌರವದಿಂದ ನೋಡುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಅವರಿಗೆ ನೀನು ಸಹಾಯ ಮಾಡುತ್ತಿದ್ದಿ. ಅನೇಕರ ತೊಂದರೆಗಳನ್ನು ಬಂಧನಗಳನ್ನು ನೀನು ಬಿಡಿಸುತ್ತಿದ್ದಿ. ಅನೇಕರು ನಿನಗೆ ತುಂಬಾ ಸಹಾಯ ಮಾಡುತ್ತಿದ್ದರು. ನೀನು ಕರುಣಾಳು ದಯಾಳು ಆಗಿದ್ದಿ. ಸರಕಾರವು ನಿನ್ನನ್ನು ಒಳ್ಳೇ ಆಧಾರದಿಂದ ಸತ್ಕರಿಸಿದೆ.

ನಿನ್ನ ಪ್ರಾರ್ಥನಾ ಕೂಟಗಳನ್ನು ಅನೇಕ ಜನರು ಗುಣ ಹೊಂದುವುದನ್ನು ಸಮಸ್ಯೆಗಳಿಂದ ಪರಿಹಾರ ಹೊಂದುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಸಮಾಜದಲ್ಲಿ ಕನಿಷ್ಠ ಮಟ್ಟದ ಜನರು ನಿನ್ನ ಸೇವಾ ಸಂಸ್ಥೆಯಿಂದ ಪ್ರಯೋಜನವನ್ನು ಹೊಂದಿದ್ದಾರೆ. ನಾನು ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿ ಮೇಲಕ್ಕೆ ತಂದಿದ್ದಿ. ಆರ್ಥಿಕ ಸಾಮಾಜಿಕವಾಗಿ ಮನ ನೊಂದವರನ್ನು ಆತ್ಮೀಯತೆಯಿಂದ ಪ್ರೀತಿಸಿ ಒಳ್ಳೆಯ ಕಾರ್ಯ ಮಾಡುವುದರಲ್ಲಿ ಅವರನ್ನು ತರಬೇತುಗೊಳಿಸಿದ್ದಿ. ಆ ನಿನ್ನ ಕ್ರಿಯೆಗಳು ಹೃದಯದಲ್ಲಿ ಬಲವಾಗಿ ಬೇರೂರಿ ನಿಂತಿದೆ. ನೀನು ಚೆನ್ನೈಯಲ್ಲಿಯೇ ಇರುತ್ತಿದ್ದರೆ ರಾಜಕೀಯದ ಒಂದು ಪಕ್ಷದ ನಾಯಕನಾಗುತ್ತಿದ್ದಿ. ದೇವರು ನಿನ್ನನ್ನು ಕರೆದಾಗ ಆತನ ಸೇವೆಯಲ್ಲಿ ತೊಡಗಿ ಆಶೀರ್ವಾದಿಸಲ್ಪಟ್ಟು ಆತ್ಮೀಯವಾಗಿ ಬಹಳವಾಗಿ ಬೇರೂರಿ ಕಾರ್ಯವನ್ನು ನಡೆಸುವವನಾಗಿರುವಿ.

ಆತ್ಮೀಯತೆಯು ದೇವರ ಮನಸ್ಸಾಗಿದೆ. ಈ ಒಂದು ಆತ್ಮೀಯತೆಯ ಪ್ರೀತಿಸು ನಿನ್ನನ್ನು ಉನ್ನತ ಸ್ಥಿತಿಗೆ ತಂದು ಮುಟ್ಟಿಸಿದೆ. ನಿನ್ನಲ್ಲಿ ಆತ್ಮೀಯತೆಯ ಬೇರು ಆಳವಾಗಿ ಹರಡಿ ಹೋದದ್ದರಿಂದ ನೀನು ಯಾವ ಕೆಲಸದಲ್ಲಿಯೂ ಕೈ ಹಾಕಿದರೆ ಸಾಫಲ್ಯತೆಯನ್ನು ತಂದು ಕೊಡುತ್ತದೆ. ನಿನ್ನ ಜೀವನದ ಶೈಲಿಯನ್ನು ನೋಡಿ ನಾನು ಪ್ರಭಾವಶಾಲಿಯಾಗಿದ್ದೇನೆ. ನಮಗೆಲ್ಲರಿಗೂ ನೀನು ಒಬ್ಬ ಮಾದರಿಯಾಗಿರುವಿ.

ದೇವರು ನಿನಗೆ ಅದ್ಭುತವಾದ ಬುದ್ಧಿ ಬಲ ಜ್ಞಾನ ಶಕ್ತಿಯನ್ನು ಕೊಟ್ಟಿದ್ದಾನೆ. ನೀನು ಕಷ್ಟದ ದಾರಿಯಲ್ಲಿ ಹೋಗುವಾಗ ಸ್ವತಃ ದೇವರೇ ಬಂದು ನಿನ್ನನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುತ್ತಾನೆ. ನಿನಗೆ ಉತ್ತಮವಾದ ರೀತಿಯಲ್ಲಿ ಕುಟುಂಬಸ್ಥರು ಸಹಾಯ ಮಾಡುತ್ತಾರೆ. ನಿನಗೆ ಬೇಕಾದ ಭಯಭಕ್ತಿಯುಳ್ಳ ಸೇವೆ ಮಾಡುವ ಜನರನ್ನು ದೇವರು ಕೊಟ್ಟಿದ್ದಾನೆ. ಪ್ರತಿಯೊಂದು ಸಂಸ್ಥೆಯ ಭಾಗಗಳು ಉತ್ತಮ ರೀತಿಯಲ್ಲಿ ಕೆಲಸವನ್ನು ಮಾಡುತ್ತವೆ. ಸೇವೆಯಲ್ಲಿ ಪಬ್ಲಿಕೇಷನ್ಸ್, ಬೈಬಲ್ ಕಾಲೇಜುಗಳಲ್ಲಿ ಶಾಲೆಯಲ್ಲಿ ಮತ್ತು ಪ್ರಮುಖ ಮತ್ತು ಶಾಖಾ ಆಲಯಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿವೆ.

ನಾವು **ಕರೆಯ ಪ್ರತಿಧ್ವನಿ** ಸಂಸ್ಥೆಯ ಸುವರ್ಣ ಮಹೋತ್ಸವವನ್ನು ಆಚರಿಸುವಾಗ, ನಿನ್ನೊಂದಿಗೆ

RNI NO. 70107/98, Postal Regn. No. TN/CH (C)/195/18-20 WPP NO. TN/PMG(CCR)/WPP-219/18-20

*(8ನೇ ಪುಟದಿಂದ)*

ಸಹಕರಿಸಿದ ಪ್ರತಿಯೊಬ್ಬರನ್ನು ಕುಟುಂಬ ಸಮೇತವಾಗಿ ನೆನಪು ಮಾಡಿಕೊಳ್ಳುತ್ತೇವೆ. ನಮ್ಮ ಆಸ್ಟ್ರೇಲಿಯಾದ ಸ್ನೇಹಿತ ರಾದ ಶ್ರೀಮಾನ್ ಹೈಡನ್ ಹಟ್ಟನ್ ಮತ್ತು ಡಾ। ಬಿ. ಜೆ. ಕೃಷ್ಣಮೂರ್ತಿ, ನನ್ನ ಮದುವೆಗೆ ಬಂದು ನನ್ನನ್ನು ಆಶೀರ್ವಾದಿಸಿದ್ದಾರೆ. ಆ ಸಂದರ್ಭವನ್ನು ಮರೆಯಲಾರೆನು. ನಮ್ಮ ಒಟ್ಟಿಗೆ ಗವರ್ನಮೆಂಟ್ ಆಫೀಸ್‌ನಲ್ಲಿ ಕೆಲಸ ಮಾಡಿದ ಶ್ರೀಮಾನ್ ಸಿ ಮುತ್ತು ಡಿ. ಕೆ. ಎಲ್ಲೂಶ, ರೆಹಮಾನ್ ಬಾಶಾ, ಬಾಲಕೃಷ್ಣನ್, ಮುನುಸಾಮಿ, ಗಜೇಂದ್ರನ್, ಜೈನ್ ಉಳ್ಳ ಬುದ್ದಿನ್ ಪರಾಂತಮನ್, ರಾಮಮೂರ್ತಿ, ತಂಗವೇಲು, ಶ್ರೀಮತಿ, ಪಾಲವನ್ನಮ್, ಶ್ರೀಮತಿ ಟಿ. ವಿ. ಸಾವಿತ್ರಿ, ಶ್ರೀಮತಿ ಜಯಕುಮಾರಿ, ಶ್ರೀಮತಿ ರಾಜೇಶ್ವರಿ, ಶ್ರೀಮತಿ ಕೃಷ್ಣವೇಣಿ, ಶ್ರೀಮತಿ ರಮೀರ್ಝು ಬೀವಿ ನಿನ್ನ ಸೇವೆಯಲ್ಲಿ ಮೊದಲು ಒಟ್ಟಿಗಿದ್ದವರು, ಶ್ರೀಮಾನ್ ಡಿ. ಡಬ್ಲ್ಯೂ ದೇವಕಾನಂದನ್, ಜೆ. ಆರ್. ಸುಂದರರಾಜ್, ಆರ್. ಇ. ಜೆಯರಾಜ್, ಎನ್. ಶ್ಯಾಮ್‌ಸುಂದರ್ ಮತ್ತು ಎಮ್. ಪೌಲ್‌ರಾಜ್ ಮೊದಲಾದವರು.

ವಿಶ್ರಾಂತಿ ತಕ್ಕೊಳ್ಳದೆ ಕೆಲಸ ಮಾಡುವುದು ನಿನಗೆ ಬಹಳ ಇಷ್ಟವಾದ ಕೆಲಸವಾಗಿದೆ. ಈಗ ನೀನು ಸ್ವಲ್ಪ ವಿಶ್ರಾಂತಿ ತಕ್ಕೊಂಡು ಕೆಲಸ ಮಾಡು. ಈಗ ಅದರ ಅವಶ್ಯಕತೆಯಿದೆ. ಎಲ್ಲಾ ಕುಟುಂಬದ ವಾತಾವರಣವನ್ನು ನೋಡಿಕೊಂಡು ನಿಧಾನದಲ್ಲಿ ಕೆಲಸ ಮಾಡು.

ಒಳ್ಳೆಯ ಮನುಷ್ಯರೊಂದಿಗೆ ಸ್ನೇಹ ಬಹಳ ಒಳ್ಳೆಯದು. ನಮ್ಮ ಈ ಗೆಳೆತನದ ಕೊಂಡಿ ಯಾವಾಗಲೂ ಕಳಚದೆ ದೃಢವಾಗಿರಬೇಕು.

ನನ್ನ ಶುಭ ಹಾರೈಕೆಗಳನ್ನು ನಿನ್ನ ಮಾಸ ಪತ್ರಿಕೆ, ಕರೆಯ ಪ್ರತಿಧ್ವನಿ ಸಂಸ್ಥೆಯಿಂದ ಯಾವಾಗಲೂ ಪ್ರಸಾರವಾಗುತ್ತಲೇ ಇರಬೇಕು. ನಿನ್ನ ಕಥೆಯನ್ನು ಬರೆಯುವ ಜೀವನ ಚರಿತ್ರೆ (Biography) ಸಾಂಘವಾಗಿ ನೆರವೇರಲಿ.

17.09.2018 ನಿಮ್ಮ ಪ್ರೀತಿಯ ಸ್ನೇಹಿತ
ಚೆನ್ನೈ - 16 ಪಿ. ಶಿವಪ್ರಕಾಶಂ

ಪ್ರಿಯ ಓದುಗರೇ ಇಷ್ಟು ದೊಡ್ಡದಾದ ಪತ್ರವನ್ನು ಓದಿದ್ದಕ್ಕೆ ನಿಮಗೆ ಉಪಕಾರಗಳು. ಎಲ್ಲಾ ಘನಮಾನ ಮಹಿಮೆ ದೇವರಿಗೆ ಸಲ್ಲಲಿ. ಸರ್ವ ಯುಗಗಳ ಅರಸನೂ ನಿರ್ಲಯನೂ ಅದೃಶ್ಯನೂ ಆಗಿರುವ ಏಕದೇವರಿಗೆ ಯುಗಾಯುಗಾಂತರಗಳಲ್ಲಿಯೂ ಮಾನ ಪ್ರಭಾವಗಳಿರಲಿ. ಆಮೆನ್ (1 ತಿಮೋಥಿ 1:17)

– ಎಸ್. ಸ್ಯಾಮ್ ಸೆಲ್ವರಾಜ್

●●●

## ದಯವಿಟ್ಟು ನಮ್ಮ ಸೇವೆಯ ಕುರಿತು ಪ್ರಾರ್ಥಿಸಿರಿ

### Please Pray for our Ministries at the Headquarters

| | | |
|---|---|---|
| 1. | ಪ್ರಾರ್ಥನಾ ಸೇವೆ : 24 ತಾಸು | |
| 2. | ಬಿಬ್ಲಿಯೋಕೋರ್-ಬೈಬಲ್ ಕರಸ್ಪಾಂಡೆನ್ಸ್ ಕೋರ್ಸ್, ಇಂಗ್ಲಿಷ್, ತಮಿಳು ಮತ್ತು ಹಿಂದಿ. | |
| 3. | ಕರೆಯ ಪ್ರತಿಧ್ವನಿ ಮಾಸ ಪತ್ರಿಕೆ : ಕನ್ನಡ, ಇಂಗ್ಲಿಷ್, ತಮಿಳ್, ಮಲಯಾಳಂ, ತೆಲುಗು, ಹಿಂದಿ, ಸಿನ್ಹಾಳಿ, ಮರಾಠಿ, ಗುಜರಾತಿ, ಬೆಂಗಾಳಿ, ಓರಿಯಾ, ನೇಪಾಳಿ, ಅಸ್ಸಾಮಿ, ಪಂಜಾಬಿ, ಉರ್ದು ಮತ್ತು ಆಫ್ರಿಕಾನ್ಸ್ | |
| 4. | ನೆಹೆಮಿಯಾ ಬೈಬಲ್ ಕಾಲೇಜ್ (ಎರಡು ಕೇಂದ್ರಗಳು) | |
| 5. | ಥಿಯೋಲೋಜಿಕಲ್ ಕರಸ್ಪಾಂಡೆನ್ಸ್ ಕೋರ್ಸ್ : ಇಂಗ್ಲೀಷ್ ಮತ್ತು ತಮಿಳು | |
| 6. | ಪರಮಾದೇಶದಲ್ಲಿ ಪಾಲುಗಾರರು. | |
| 7. | ತರಬೇತಿ ಕಾರ್ಯಕ್ರಮಗಳು | |
| 8. | ಕರಪತ್ರ ಹಾಗೂ ಅನುಕರಣ ಸೇವೆ | |
| 10. | ಸುವಾರ್ತಾ ಮುದ್ರಣಾಲಯ - ಪ್ರಕಾಶನ | |
| 9. | ಸೆಂಟ್ ಪಾಲ್ಸ್ ಮೆಟ್ರಿಕ್ಯೂಲೇಷನ್ ಸ್ಕೂಲ್ | ಗ್ರಾಮೀಣ ಪ್ರದೇಶದ ಪ್ರೌಢ ಶಾಲೆ |
| 11. | ಸಬ್ಬತ್ ಶಾಲೆ | ಭಾನುವಾರ ಬೆಳಗ್ಗೆ 08.30 ಗಂಟೆಗೆ |
| 12. | ತಮಿಳು ಭಾಷೆಯಲ್ಲಿ ಆರಾಧನೆ | ಮುಂಜಾನೆ 05.00., 7.00 ಮತ್ತು 10.00 ಗಂಟೆಗೆ |
| 13. | ತೆಲುಗು ಭಾಷೆಯಲ್ಲಿ ಆರಾಧನೆ | ಭಾನುವಾರ ಸಾಯಂಕಾಲ 04.00 ಗಂಟೆಗೆ |
| 14. | ಹಿಂದಿ ಭಾಷೆಯಲ್ಲಿ ಆರಾಧನೆ | ಭಾನುವಾರ ಸಾಯಂಕಾಲ 05.00 ಗಂಟೆಗೆ |
| 15. | ಮಲಯಾಳಂ ಭಾಷೆಯಲ್ಲಿ ಆರಾಧನೆ | ಭಾನುವಾರ ಸಾಯಂಕಾಲ 05.00 ಗಂಟೆಗೆ |
| 16. | ಇಂಗ್ಲೀಷ್ ಹಾಗೂ ತಮಿಳು ಭಾಷೆಯಲ್ಲಿ ಆರಾಧನೆ | ಭಾನುವಾರ ಸಾಯಂಕಾಲ 06.00 ಗಂಟೆಗೆ |
| 17. | ಕರಪತ್ರ ವಿತರಣೆ | ಭಾನುವಾರ ಮಧ್ಯಾಹ್ನ 02.30 ಗಂಟೆಗೆ |
| 18. | ಸಭಾಪಾಲಕರಿಗೆ ಮಾರ್ಗದರ್ಶನ | ಭಾನುವಾರ ಸಾಯಂಕಾಲ 04.00 ಗಂಟೆಗೆ |
| 19. | ಮಹಿಳೆಯರ ಪ್ರಾರ್ಥನಾ ಕೂಟ | ಬುಧವಾರ ಸಾಯಂಕಾಲ 05.30 ಗಂಟೆಗೆ |
| 20. | ಮಧ್ಯವಾರದ ಆರಾಧನೆ | ಬುಧವಾರ ಸಾಯಂಕಾಲ 06.30 ಗಂಟೆಗೆ |
| 21. | ಪುರುಷರಿಗಾಗಿ ಪ್ರಾರ್ಥನಾ ಕೂಟ | ಶುಕ್ರವಾರ ಸಾಯಂಕಾಲ 06.30 ಗಂಟೆಗೆ |
| 22. | ಶನಿವಾರ ಆರಾಧನೆ | ಶನಿವಾರ ಸಾಯಂಕಾಲ 06.00 ಗಂಟೆಗೆ |
| 23. | ಕಾರ್ಮಿಕರ ಕೂಟ | ಶನಿವಾರ ಸಾಯಂಕಾಲ 06.00 ಗಂಟೆಗೆ |
| 24. | ಗೃಹ ಪ್ರಾರ್ಥನೆಗಳು | ಮಂಗಳವಾರ ಹಾಗೂ ಗುರುವಾರ ಸಾಯಂಕಾಲ 06.30 ಗಂಟೆಗೆ |
| 25. | ವಿಶೇಷ ಪವಿತ್ರ ರಾತ್ರಿ ಭೋಜನ ಸಂಸ್ಕಾರ | ಪ್ರತಿ ತಿಂಗಳಿನ ಮೊದಲನೆಯ ದಿನ ಮುಂಜಾನೆ 05.30 ಗಂಟೆಗೆ |
| 26. | ಸುವಾರ್ತಿಕರ ಕೂಟ | ಮೊದಲ ಶನಿವಾರ ಸಾಯಂಕಾಲ 05.30 ಗಂಟೆಗೆ |
| 27. | ಮಾತಾ-ಪಿತೃಗಳಿಗಾಗಿ ಪ್ರಾರ್ಥನೆ | ಪ್ರತಿ ಮೊದಲನೆಯ ಭಾನುವಾರ ಸಾಯಂಕಾಲ 04.00 ಗಂಟೆಗೆ |
| 28. | ಪೂರ್ಣ ರಾತ್ರಿ ಪ್ರಾರ್ಥನೆ | ಪ್ರತಿ 2ನೇ ಶುಕ್ರವಾರ ಸಾಯಂಕಾಲ 09.30 ಗಂಟೆಗೆ |
| 29. | ಉಪವಾಸ ಪ್ರಾರ್ಥನೆ | ಮೊದಲನೆ ಶನಿವಾರ ಬೆಳಿಗ್ಗೆ 09.30 ಗಂಟೆಗೆ |
| 30. | ಪವಿತ್ರ ರಾತ್ರಿ ಭೋಜನ ಸಂಸ್ಕಾರ | 2ನೇ ಭಾನುವಾರದ ಆರಾಧನೆಯಲ್ಲಿ |
| 31. | ಪ್ರಾತಃಕಾಲದ ಧ್ಯಾನ | ಪ್ರತಿದಿನ ಮುಂಜಾನೆ 05.00 ಗಂಟೆಗೆ |
| 32. | ಸಿಬ್ಬಂದಿ ವರ್ಗದ ಧ್ಯಾನ | ಪ್ರತಿದಿನ ಮುಂಜಾನೆ 09.00 ಗಂಟೆಗೆ |
| 33. | ಕಛೇರಿ (ಭಾನುವಾರ ಹೊರತುಪಡಿಸಿ) | ಮುಂಜಾನೆ 09.00ರಿಂದ ರಾತ್ರಿ 09.00ರ ವರೆಗೆ |

RNI NO. 70107/98
Postal Regn. No. TN/CH/(C)/195/18-20
WPP NO. TN/PMG(CCR)/WPP- 219/18-20
Date of Publication: Second week of every month
Date of Posting : 9th & 10th of every month
Posted at "Egmore RMS / 1 Patrika Channel"
on 10th NOVEMBER 2018
If un-delivered please return to:
**ECHO OF HIS CALL (KANNADA)**
P.O. Box No. 2957,
Chepauk, Chennai - 600 005, INDIA.
Phone: (+ 91- 44) 2852 8282, 2852 9293, 2854 7766

***JESUS LOVES YOU!***

To

*GOD BLESS YOU!*

Owned and published by **S. Sam Selva Raj** from 18, Mohammed Abdullah Sahib Street, Chepauk, Chennai-600 005 and printed by him at **Echo of His Call Printers** 18, Mohammed Abdullah Sahib Street, Chepauk, Chennai-600 005. Editor: **S. Sam Selva Raj.**